ಪಾಂಚಜನ್ಯ

ಕುವೆಂಪು



ರವಿ ಪ್ರಕಾಶನ : ವಾಣೀವಿಲಾಸಪುರಂ : ಮೈಸೂರು ೨

ಬೆಲೆ ರೂ. ೮

ಪಾಂಚಜನ್ಯ

ಕುವೆಂಪು

ಉದಯರವಿ ಪ್ರಕಾಶನ
ವಾಣೀವಿಲಾಸಪುರಂ
ಮೈಸೂರು ೨

ಮೊದಲನೆಯ ಮುದ್ರಣ : ೧೯೩೩
ಎರಡನೆಯ ಮುದ್ರಣ : ೧೯೪೪
ಮೂರನೆಯ ಮುದ್ರಣ : ೧೯೫೫
ಉದಯರವಿಯಿಂದ ನಾಲ್ಕನೆಯ ಮುದ್ರಣ : ೧೯೬೩
ಐದನೆಯ ಮುದ್ರಣ : ೧೯೬೯
ಆರನೆಯ ಮುದ್ರಣ : ೧೯೭೫

ಮುದ್ರಕರು : ಜಿ. ಎಸ್. ನಾಗೇಂದ್ರ
ಕರ್ನಾಟಕ ಪ್ರೆಸ್, ಬಜ್ಜಣ್ಣ ಲೇನ್, ಚಾಮರಾಜಪುರಂ, ಮೈಸೂರು ೦೦೪

ವಿವರ

ಪಾಂಚಜನ್ಯ

ನಡೆ ಮುಂದೆ, ನಡೆ ಮುಂದೆ,
ನುಗ್ಗಿ ನಡೆ ಮುಂದೆ!
ಜಗ್ಗದೆಯೆ, ಕುಗ್ಗದೆಯೆ,
ಹಿಗ್ಗಿ ನಡೆ ಮುಂದೆ!

ಬೆಚ್ಚು ಬಿಡು, ನೆಚ್ಚು ನೆಡು
ಕೆಚ್ಚೆದೆಯ ಗುಡಿಯಲ್ಲಿ;
ಸೆರೆಯ ಹರಿ, ಅರಿಯನಿರಿ,
ಹುಟ್ಟಳಿಸು ಹುಡಿಯಲ್ಲಿ!
ನಾನಳಿವೆ, ನೀನಳಿವೆ,
ನಮ್ಮೆಲುಬುಗಳ ಮೇಲೆ
ಮೂಡುವುದು, ಮೂಡುವುದು
ನವಭಾರತದ ಲೀಲೆ!
ನೊಂದ ದನಿ, ಕಣ್ಣಪನಿ,
ಬರಿದೆ ಎಂದೊರೆಯದಿರು!
ತೆತ್ತ ಹಣ, ಸತ್ತ ಹೆಣ
ಹೋಯ್ತೆಂದು ಮೊರೆಯದಿರು!
ಪೊಡವಿಯೊಳಗಡಗಿರುವ
ತಳಹದಿಯ ತೆಗಳುವರೆ?
ಮೆರೆಯುತಿರುವರಮನೆಯ
ಸಿರಿಯೊಂದ ಹೊಗಳುವರೆ?

ಎಲ್ಲ ಇದೆ, ಎಲ್ಲ ಇದೆ
ನಿತ್ಯತೆಯ ಗಬ್ಬದಲಿ;
ಮುಂದೆಯದು ತೋರುವುದು
ಬಿಡುಗಡೆಯ ಹಬ್ಬದಲಿ!
ನೆಚ್ಚುಗೆಡಬೇಡ ನಡೆ,
ಕೆಚ್ಚೆದೆಯ ಕಲಿಯೆ!
ಬೆಚ್ಚಿದರೆ, ಬೆದರಿದರೆ,
ಕಾಳಿಗದು ಬಲಿಯೆ?
ಭರತಖಂಡದ ಹಿತವೆ
ನನ್ನ ಹಿತ ಎಂದು,
ಭರತಮಾತೆಯ ಮತವೆ
ನನ್ನ ಮತ ಎಂದು.
ಭಾರತಾಂಬೆಯ ಸುತರೆ
ಸೋದರರು ಎಂದು
ಭಾರತಾಂಬೆಯ ಮುಕ್ತಿ
ಮುಕ್ತಿ ನನಗೆಂದು,
ನುಗ್ಗು ಮುಂದಕೆ, ಧೀರ,
ಕಾಳೆಗದ ಕೊಲೆಗೆ!
ನುಗ್ಗು ಮರಣಕೆ, ವೀರ,
ಸಗ್ಗದಾ ನೆಲೆಗೆ!
ನೋಡದೋ ನೋಡಲ್ಲಿ:
ದರ್ಪರಥಪಡಿಯಲ್ಲಿ
ಹೊರಳುತಿರುವಳು ತಾಯಿ
ನೆತ್ತರಿನ ಪುಡಿಯಲ್ಲಿ!
ಬಾಳನೊರೆಯಿಂದ ಹಿರಿ!
ನುಗ್ಗು, ನಡೆ, ಕಟ್ಟ ಹರಿ!

ತಡೆಯೆ ಬಂದವರ ಇರಿ !
ಒಲಿಯುವಳು ಜಯದ ಸಿರಿ !
ಜನ್ಮವೊಂದಳಿದರೇಂ ?
ನೂರಿಹವು ಬಲಿಗೆ !
ಕಾಳೆಗದೊಳಳಿಯಲೇಂ ?
ಸಾವೆ ಸಿರಿ ಕಲಿಗೆ !

ನಿಂತೇನು ನೋಡುತಿಹೆ ?
ಹದುಗುವರೆ ಇಲ್ಲಿ ?
ಮಸಣವಾಗಲಿ ಎದೆಯು
ರಣರಂಗದಲ್ಲಿ !
ನೆತ್ತರನು ನೋಡುವೆಯ ?
ಸತ್ತವರ ನೋಡುವೆಯ ?
ಕಂಕಾಲಗಳ ಗೂಡೆ ?
ಮರುಳುಗಳ ನೆಲೆಬೀಡೆ ?
ಕಾಳಿಯಳುಕುವಳೇನು
ರಕ್ಕಸರ ಬಲಿಗೆ ?
ಸಮರ ರಂಗದ ನಡುವೆ
ಬೆದರಿಕೆಯೆ ಕಲಿಗೆ ?

ಹಾ ನೋವು ! ಹಾ ನೋವು !
ಎಂದೆಲ್ಲ ಕೂಗುವರೆ ?
ಹಾ ನೀರು ! ಹಾ ನೀರು !
ಎಂದಸುವ ನೀಗುವರೆ ?
ಕೂಗಿಗೆದೆಗರಗದಿರು !
ಬೇನೆಯಿರೆ ಮರುಗದಿರು !

ಕಂಬನಿಯ ಕರೆಯದಿರು,
ಗುರಿಯ ಮರೆಯದಿರು;
ಕಲಿಯೆ, ಹಿಂಜರಿಯದಿರು,
ತಾಯ ತೊರೆಯದಿರು!
ಎಲುಬುಗಳ ತೊಲೆಗಳಲಿ
ಮಾಂಸದಾ ಮಣ್ಣಿನಲಿ
ನೆತ್ತರಿನ ನೀರಿನಲಿ
ಬೇನೆ ಬಿಸುಸುಯ್ಲಿನಲಿ
ಬಿಡುಗಡೆಯ ಸಿರಿಗುಡಿಯ
ಮಸಣದಲಿ ಕಟ್ಟು!
ಪಾವನದ ತಾಯಡಿಯ
ಬಲ್ಮೆಯಲಿ ಮುಟ್ಟು!
ಆತ್ಮವಚ್ಯುತವೆಂದು
ಜನ್ಮಗಳು ಬಹವೆಂದು
ಮೃತ್ಯು ನಶ್ವರವೆಂದು
ಭಾರತಿಗೆ ಜಯ ಎಂದು
ನಡೆ ಮುಂದೆ, ನಡೆ ಮುಂದೆ,
ನುಗ್ಗಿ ನಡೆ ಮುಂದೆ!
ಜಗ್ಗದೆಯೆ, ಕುಗ್ಗದೆಯೆ,
ಹಿಗ್ಗಿ ನಡೆ ಮುಂದೆ!

೨೦-೯-೧೯೨೯

ಕಾಳಿ ಬರುವಳು

ನೋಡು ಬರುತಲಿರುವಳದೋ
ರುದ್ರ ಭದ್ರ ಕಾಳಿಯು !
ದೇವಿ, ಚಂಡಿ, ಚಾಮುಂಡಿ,
ರಕ್ತ ರುಂಡಮಾಲಿಯು !
ಡಮ ಡಮ ಡಮ ಡೋಲು ಬಡಿ !
ಭಂ ಭಂ ಭಂ ಕಾಕು ನುಡಿ !
ಧಿಮಿ ಧಿಮಿ ಧಿಮಿ ಎಂದು ಕುಣಿ !
ಜಯ ಜಯ ಜಯ ಎಂದು ಮಣಿ !
ನೋಡು ಬರುತಲಿರುವಳದೋ
ರುದ್ರ ಭದ್ರ ಕಾಳಿಯು !
ದೇವಿ, ಚಂಡಿ, ಚಾಮುಂಡಿ,
ರಕ್ತ ರುಂಡಮಾಲಿಯು !

ವ್ಯೋಮವೊಂದು ಕೈಯ ತಾಳ
ಭೂಮಿಯೊಂದು ಕೈಯ ತಾಳ
ಬಡಿದು ಬಡಿದು ಬರುವಳು !
ಜನನ ಒಂದು ಅಡಿಯ ಹೆಜ್ಜೆ
ಮರಣ ಒಂದು ಅಡಿಯ ಹೆಜ್ಜೆ
ಕುಣಿದು ಕುಣಿದು ಬರುವಳು !
ಮಿಂಚನೊಂದು ಕೈಲಿ ಹಿಡಿದು
ಸಿಡಿಲನೊಂದು ಕೈಲಿ ಹಿಡಿದು
ಬಾನ ಡೋಳ ಬಡಿಯುತ

ಮನವನೊಮ್ಮೆ ಮೆಟ್ಟಿ ತುಳಿದು
ಎದೆಯನೊಮ್ಮೆ ಮೆಟ್ಟಿ ನಲಿದು
ಕಿವಿದೆರೆಯನು ಒಡೆಯುತ,
ನೋಡು, ಬರುತಲಿರುವಳದೋ
ರುದ್ರ ಭದ್ರ ಕಾಳಿಯು !
ದೇವಿ, ಚಂಡಿ, ಚಾಮುಂಡಿ
ರಕ್ತ ರುಂಡಮಾಲಿಯು !

ಒಂದು ಅಡಿಯನಿಟ್ಟು ತೆಗೆಯೆ
ಶ್ಮಶಾನ ಮೆರೆವುದು !
ಮತ್ತೊಂದು ಅಡಿಯನಿಟ್ಟು ತೆಗೆಯೆ
ಉದ್ಯಾನ ನಲಿವುದು !
ದೇಶವೊಂದು ಕೈಯ ಖಡ್ಗ
ಬಡಿಬಡಿದು ಬರುವಳು ;
ಕಾಲವೊಂದು ಕೈಯ ಖಡ್ಗ
ಕಡಿಕಡಿದು ಬರುವಳು !
ಹೊಳೆಹೊಳೆಯುವ ಕಣ್ಗಳಿಂದ
ಕಾರ್ಮಿಂಚ ಕಾರುತ,
ಗುಡು ಗುಡುಗುವ ಕಂಠದಿಂದ
ಕಾರ್ಮೊಳಗ ಬೀರುತ,
ಜ್ವಾಲಾಮುಖಿಯ ರುದ್ರಶಿಖಿಯ
ಕೈಲಿ ಹಿಡಿದು ಬರುವಳು ;
ಹಿರಿಯ ಇರುಳ ಕರಿಯ ತಿರುಳ
ಮೈಲಿ ಮುಡಿದು ಬರುವಳು ;

ಕಡಲ ವಾಣಿಯವಳ ವಾಣಿ
ಕೂಗಿ ರೇಗಿ ಬರುವಳು ;
ಕೃಷ್ಣಮೇಘ ಸದೃಶ ವೇಣಿ
ತೂರಿ ಬೀರಿ ಬರುವಳು !
ಪ್ರಳಯದಿಂ ಸೃಷ್ಟಿಯನು
ಮೇಲೆತ್ತಿ ಬರುವಳು ;
ಪ್ರಳಯದಲಿ ಸೃಷ್ಟಿಯನು
ಕೆಳಗೊತ್ತಿ ಬರುವಳು !
ಅವ್ಯಕ್ತ ಬ್ರಹ್ಮದೆದೆಯ ಮೇಲೆ
ಕುಣಿದಾಡಿ ಬರುವಳು !
ವ್ಯಕ್ತ ಬ್ರಹ್ಮವೆನ್ನ ಲೀಲೆ
ಎನುತೋಡಿ ಬರುವಳು !
ವಿಜಯ ರಣೋನ್ಮತ್ತೆಯಾಗಿ
ಬರುವಳಾದಿ ಮಾಯೆಯು ;
ಮಕ್ಕಳೆದೆಯ ಅಳಲ ನೀಗಿ
ಬರುವಳದೋ ತಾಯಿಯು !
ನೋಡು ಬರುತಲಿರುವಳದೋ
ರುದ್ರ ಭದ್ರ ಕಾಳಿಯು ;
ದೇವಿ, ಚಂಡಿ, ಚಾಮುಂಡಿ,
ರಕ್ತರುಂಡಮಾಲಿಯು.

೧೩-೧೦-೧೯೨೯

ಕುಮಾರ ವ್ಯಾಸ

ಕುಮಾರ ವ್ಯಾಸನು ಹಾಡಿದನೆಂದರೆ
ಕಲಿಯುಗ ದ್ವಾಪರವಾಗುವುದು !
ಭಾರತ ಕಣ್ಣಲಿ ಕುಣಿವುದು ; ಮೆಯ್ಯಲಿ
ಮಿಂಚಿನ ಹೊಳೆ ತುಳುಕಾಡುವುದು !

ಆ ಕುರುಭೂಮಿಯು ತೋರುವುದು ;
ಆ ರಣರಂಗದಲಿ
ಆ ಸಂಗ್ರಾಮದಲಿ
ಪಟುಭಟರಾರ್ಭಟ ಕೇಳುವುದು !
ವ್ಯೆ ನವಿರೇಳುವುದು !
ಹೊಳೆಯುವ ಕೈದುಗಳಾಟದಲಿ
ಕಲಿಗಳ ಕದನದ ಕೂಟದಲಿ
ತಾಗುವ ಗದೆಗಳ ಸಂಘಟ್ಟಣೆಯಲಿ
ರಥ ಚಕ್ರಧ್ವನಿ ಚೀತ್ಕಾರದಲಿ
ಸಾಯ್ವರ ಶಾಪದಲಿ
ಬೀಳ್ವರ ತಾಪದಲಿ
ನಸು ಸೋತಿರುವರ ಕೋಪದಲಿ
ನೆರೆ ಗೆದ್ದಿಹರಾಟೋಪದಲಿ
ನುಗ್ಗುವ ಸೈನ್ಯದ ಹಾಹಾರವದಲಿ
ಕೆನೆಯುವ ಹಯಗಳ ಹೇಷಾರವದಲಿ
ಕಿವಿ ಬಿರಿಯುವುದು !
ಎದೆ ಮುರಿಯುವುದು !

ಕುಮಾರ ವ್ಯಾಸ

ಬಸಿಯುವ ಮಜ್ಜೆಯ ಪಂಕದೊಳೋಡಿ
ಚಿಮ್ಮುವ ರಕ್ತದ ಬುಗ್ಗೆಯ ನೋಡಿ
ಕಣ್ಣೊಡೆಯುವುದು !
ಮೈನಡುಗುವುದು !

ಕೇಳಿರಿ ! ಪಾರ್ಥನ ಸಾರಥಿಯು
ರಣ ಗೀತೆಯನು,
ರಣ ನೀತಿಯನು,
ಬೋಧಿಸುವನು ನಿರ್ಭೀತಿಯನು !
ಕುರುರಂಗದ ಶರಶಯ್ಯೆಯಲಿ
ಭೀಷ್ಮನು ಮಲಗಿಹನು !
ಹೆಣಗಳ ಬಣಬೆಯ ಮಂಚದಲಿ
ದ್ರೋಣನು ಬಿದ್ದಿಹನು !
ನೆತ್ತರವೀಂಟುತಲಿರುವನು ಭೀಮನು,
ಅಯ್ಯೋ ನೋಡಲ್ಲಿ !
ರಥದಿಂದುರುಳುತಲಿರುವನು ಕರ್ಣನು,
ಹಾ ! ಹಾ ! ನೋಡಲ್ಲಿ !
ರಣ ಚಂಡಿಯು ಆ ಬೆಂಕಿಯ ಮಗಳು
ಹೆಣ್ಣಿನ ರೂಪದ ಬರಸಿಡಿಲವಳು !
ಮುಗುಳ್ನಗೆ ಬೀರುತ ನೋಡಲ್ಲಿ
ನಿಂತಿರುವಳು ರಣರಂಗದಲಿ
ದ್ರೌಪದಿ ಮುಡಿಗೆದರಿ !

ವೈಶಂಪಾಯನ ಸರಸಿಯ ತೀರದಿ,
ತೋರುವರಾರಲ್ಲಿ ?

ಕೌರವದೇವನು ಸಿಡಿಲಾಗಿರುವನು
ಭೀಮನ ಸರಿಸದಲಿ !
ವೈರಿಯ ಎದೆಯನು
ಬಡಿಯುವ ಗದೆಯನು
ಮೇಲೆತ್ತಿರುವನು ನೋಡಲ್ಲಿ !
ಭೀಮನು ಬಿದ್ದನೆ ?
ಕೌರವ ಗೆದ್ದನೆ ?
ಮುಂದಾಗುವುದನು ಕಾಣಲ್ಲಿ !
ಇದಾವ ನ್ಯಾಯ ?
ಏನನ್ಯಾಯ !
ಕೃಷ್ಣನ ಕುಹಕವ ನೋಡಲ್ಲಿ !
ಏನನು ನೋಡುವೆ ? ತಡೆಯುವೆ ಏಕೆ ?
ಕೌರವರಾಯನು ಮಡಿಯಲೆ ಬೇಕೆ ?
ಯುವಕನೆ, ತುಡುಕು ಕಠಾರಿಯನು !
ಹೊಡೆ ರಣಭೇರಿಯನು !
ನಡೆ, ನಡೆ ! ಊದು ತುತೂರಿಯನು !
ಕರೆ ರಣಮಾರಿಯನು !

ಕುಮಾರ ವ್ಯಾಸನು ಹಾಡಿದನೆಂದರೆ,
ಕಲಿಯುಗ ದ್ವಾಪರವಾಗುವುದು !
ಭಾರತ ಕಣ್ಣಲಿ ಕುಣಿವುದು, ಮೈಯ್ಯಲಿ
ಮಿಂಚಿನ ಹೊಳೆ ತುಳುಕಾಡುವುದು !
ಕಲಿ ಕೆಚ್ಚಾಗುವನು !
ಕವಿ ಹುಚ್ಚಾಗುವನು !

೧೦-೧-೧೯೩

ವಿಪ್ಲವಮೂರ್ತಿ

[ಹುಲಿದೊವಲನುಟ್ಟು ಮುಡಿಗೆದರಿದ ಉನ್ಮಾದಮೂರ್ತಿ ಅರೆಮಬ್ಬಿನಲ್ಲಿ ಮೂಡಿ ಅಭಿನಯಿಸುತ್ತಾನೆ. ಭಾವಕ್ಕೆ ತಕ್ಕಂತೆ ಪದ ಸ್ವರ ಅಂಗವಿನ್ಯಾಸಗಳಿಂದಲೂ ಸತ್ತ್ವ ರಜಸ್ಸು ತಮಸ್ಸುಗಳನ್ನು ಸೂಚಿಸುವ ಗಾಂಭೀರ್ಯ ವೇಗ ಮಾಂದ್ಯಗಳಿಂದಲೂ ವರ್ತಿಸುತ್ತಾನೆ. ನಡುನಡುವೆ ಮಾತಿಲ್ಲದೆ ನರ್ತಿಸುತ್ತಾನೆ.]

ವಿಲಯದ ವಿಪ್ಲವ ಮೂರ್ತಿಯು ನಾನು ;
ಕಾಳಿಯು ನಾನು,
ರುದ್ರನು ನಾನು,
ತಾಂಡವಗೈಯುವ ಭೈರವ ನಾನು !
ಬೊಮ್ಮವನೊಡೆಯುವ ಬರಸಿಡಿಲಾನು,
ಕರ್ಮುಗಿಲೊಗೆಯುವ ಕಾರ್ಮಿಂಚಾನು ;
ಹೆಣ್ಣೊರಲಿಂಚರ ನಾನು,
ಕಣ್ಮಿಂಚಾನು !

ಮಸಣದ ಸೂಡಿನ ಬೆಂಕಿಯು ನಾನು,
ಮೃತ್ಯುವು ನಾನು,
ಮೃತ್ಯುಂಜಯ ನಾನು !
ರುದ್ರನ ತಲೆಯಲಿ ಚಂದ್ರನು ನಾನು,
ಗಂಗೆಯು ನಾನು,
ಕೇಸುರಿಗಣ್ಣಾನು !
ಸಿಡಿಲಿನ ಶಕ್ತಿಯು ನಾನು !
ಮಿಂಚಿನ ದೀಪ್ತಿಯು ನಾನು !

ಹೆಣ್ಗಳ ಮೊಗದ ಮುಗುಳ್ನಗೆ ನಾನು,
ಕೆನ್ನೆಯ ಕೆಂಪಾನು,
ಕಣ್ಗಳ ಸೊಂಪಾನು,
ಅವರಿನಿಗೊರಲಿನ ಬೀಣೆಯು ನಾನು!
ಮಸಣದ ದೆವ್ವದ ಚೀರುಲಿ ನಾನು
ಸಿಡಿಮದ್ದಿನ ಪೇರುಂಡೆಯು ನಾನು ;
ಸಿಡಿವ ಫಿರಂಗಿಯು ನಾನು,
ಸಿಡಿಲಿನ ಪುಡಿ ನಾನು,
ಮಿಂಚಿನ ಕಿಡಿ ನಾನು!
ಹಾವಿನ ಬಾಯಲಿ ವಿಷ ನಾನು!
ತಾಯಿಯರೆದೆಯಲಿ ಹಾಲಾನು!
ಕೌರವ ನಾನು,
ಕೌರವನೆದೆಯಲಿ ಕೆಚ್ಚಾನು ;
ಮೋಣವನೆತ್ತಿದ ಬಲ್ಗದೆ ನಾನು!........
ರಾವಣ ನಾನು,
ರಾವಣನೊಲ್ಮೆಯ ಕಿಚ್ಚಾನು,
ಮೋಣವನುರದಲಿ ಶಕ್ತಿಯು ನಾನು!
ಉನ್ಮತ್ತನು ನಾನು,
ಸ್ಥಿರಚಿತ್ತನು ನಾನು!
ಬೆಂಗದಿರನ ಬಿಸಿ ನಾನು,
ತಣ್ಗದಿರನ ತಂಪಾನು!

೨

ಈಶ್ವರ ಶಿರದಲಿ ಸೃಷ್ಟಿಯ ಕೆರಳಿಪ
ರಾಮರಸಾಯನ ನಾನು!

ಹುಡುಗಿಯರೆದೆಯಲಿ ತುಂಬಿ ತುಳುಕುತಿಹ
ಬೇಟದ ಕಿಚ್ಚಾನು!
ನಲ್ಮೆಯ ಹುಚ್ಚಾನು!
ಬನಗಿಳಿ ನಾನು,
ಕೋಗಿಲೆ ನಾನು,
ಬಣ್ಣದ ಮಳೆಬಿಲ್ಲಾನು,
ಚೆಲುವೆಯರುಡಿಗೆಗಳ ಚೆಲುವಂಚಾನು!.......
ಕೋವಿಯು ನಾನು,
ಸಿಡಿಗುಂಡಾನು,
ವೀರನ ಖಡ್ಗವು ನಾನು,
ಹರಿಯುವ ರಕ್ತದ ವಾಹಿನಿ ನಾನು!
ಲೋಹಿತ ವಿಪ್ಲವದುರಿ ನಾನು!
ಅವ್ಯಕ್ತ ಬ್ರಹ್ಮವು ನಾನು;
ವ್ಯಕ್ತ ಬ್ರಹ್ಮವು ನಾನು,
ಮಾಯೆಯು ನಾನು,
ಮಾಯಾತೀತನು ನಾನು,
ಕಾಲವು ನಾನು,
ದೇಶವು ನಾನು,
ನಿರ್ಗುಣಿ ನಾನು,
ಸೃಷ್ಟಿಸ್ಥಿತಿಲಯವೆಲ್ಲವು ನಾನು!....
ಪರಶಿವ ನಾನು,
ಶ್ರೀಹರಿ ನಾನು,
ಹಹ್ಹ ಹ್ಹ ಹ್ಹ
ಅನ್ನವು ನಾನು;
ನೀರೂ ನಾನು;
ಹುಚ್ಚಾನು!

೩

ಅಂಬರ ಚುಂಬಿತ ಶುಭ್ರ ಹಿಮಾವೃತ
ದಿವ್ಯ ಹಿಮಾಲಯ ನಾನು !
ಮಿಂಚಿನ ಕಡಲನು ಕಡೆಯಲು ಮೂಡಿದ
ಸಿಡಿಲನ ಸಿಂಹವು ನಾನು !
ಕನ್ನಡ ನಾನು,
ಸಾಗರ ನಾನು,
ಕುಲ ಪರ್ವತ ನಾನು,
ಶ್ರೀ ಕೃಷ್ಣನ ಚಕ್ರವು ನಾನು !........
ನಿದ್ದೆಯು ನಾನು ;
ಹುಚ್ಚಿನ ಮುದ್ದೆಯು ನಾನು !
ಪಾಪವು ನಾನು,
ನರಕವು ನಾನು,
ವೈಕುಂಠವು ನಾನು,
ಸ್ವರ್ಗವು ನಾನು !
ತಾಂಡವಗೈಯುವ ಭೈರವ ನಾನು,
ಕಾಳಿಯು ನಾನು,
ರುದ್ರವು ನಾನು,
ವಿಲಯದ ವಿಪ್ಲವ ಮೂರ್ತಿಯು ನಾನು !

೧೦-೨-೧೯೩೦

ಭೈರವನಾರಿ

ಕುಣಿಯುವಳಾರೀ ಭೈರವನಾರಿ
ರಣರಂಗದಲಿ ರೌದ್ರವ ತೋರಿ ?

ಕಣ್ಣುಗಳಿಂದಂ ಕಿಡಿಗಳ ಕಾರಿ
ದೆಸೆದೆಸೆದೆಸೆಗೆ ಜಡೆಯನು ಬೀರಿ
ಕೆನ್ನಾಲಗೆಯಿಂ ರಕ್ತವ ಸೋರಿ
ಹುಚ್ಚಳವೋಲುನ್ಮತ್ತತೆ ಮೀರಿ !

ಕಂಠದೊಳಂಜಿಪ ನರಶಿರಮಾಲೆ !
ಕರದಲಿ ರಂಜಿಪ ರೂಕ್ಷಜ್ವಾಲೆ !
ಏನಿದು ಕಾಳಿಯ ತಾಂಡವ ಲೀಲೆ ?
ತೂಗುತಲಿದೆ ವಿಶ್ವದ ಉಯ್ಯಾಲೆ !

ಭ್ರೂಭಂಗದಲಿ ಕೋಟ್ಯನುಕೋಟಿ
ರಾಕ್ಷಸವೃಂದವ ಮುರಿಮುರಿದೊಟ್ಟಿ
ಶ್ಯಾಮೆಯು ನಗ್ನ ಭಯಂಕರಿಯಾಗಿ
ತಾಂಡವಗೈವಳು ಶಂಕರಿ ಕೂಗಿ !

ನರ್ತನದಿಂ ನವಶಕ್ತಿಯು ಹೊಮ್ಮಿ
ಸೃಷ್ಟಿ ಸ್ಥಿತಿ ಲಯ ಚಕ್ರಂ ಚಿಮ್ಮಿ
ಜಡ ಚೇತನ ರೂಪುಗಳಾಗೊಡೆದು
ತೋರ್ಪುದು ಸುಖದುಃಖಗಳನು ಹಡೆದು !

೧೫–೧೦–೧೯೨೯

ಸತ್ಯಾಗ್ರಹಿ

ಸ್ವಾತಂತ್ರ್ಯ ಸಂಗ್ರಾಮದಲಿ ತನ್ನ ಜೀವವನು
ಲೆಕ್ಕಿಸದೆ ಹೋರುವವನು ವೀರ ಸತ್ಯಾಗ್ರಹಿ ;
ನೊಂದರೂ ಬೆಂದರೂ ಸತ್ಯವನು ಕೈಬಿಡದೆ
ಜವನ ದಾಡೆಯ ನುಗ್ಗುವವನು ಸತ್ಯಾಗ್ರಹಿ !
ಆತ್ಮಶಕ್ತಿಯ ಬಲದಿ ಮಿಂಚುಗಳ ಸಂತೈಸಿ
ಸಿಡಿಲುಗಳ ಬೋಳೈಸುವವನು ಸತ್ಯಾಗ್ರಹಿ ;
ಹೊಡೆಯದೆಯೆ ತಡೆಯುವನು ವೀರ ಸತ್ಯಾಗ್ರಹಿ !
ಗೆಲ್ಲದೆಯೆ ಗೆಲ್ಲುವನು ವೀರ ಸತ್ಯಾಗ್ರಹಿ !
ಸಿಡಿಗುಂಡಿನೆದುರಿನಲಿ, ಕೂರಸಿಗಳೆದುರಿನಲಿ,
ಕಬ್ಬಿಣದ ಸಂಕೋಲೆಗಳ ಕರಿಯ ತೆಕ್ಕೆಯಲಿ,
ಜೈಲಿನಲಿ, ಅಧಿಕಾರಿಗಳ ಕ್ರೂರ ದರ್ಪದಲಿ,
ಹರಿವೆದೆಯ ನೆತ್ತರಿನ ಹೊಳೆಯಲ್ಲಿ, ಮುಂದಿಟ್ಟ
ಹಜ್ಜೆ ಹಿಂದೆಗೆಯದಳಿವವನು ಸತ್ಯಾಗ್ರಹಿ !
ದೇಶಮಾತೆಯ ಸುಖಕೆ ತನ್ನ ಸುಖವನು ಬೇಳ್ವ,
ದೇಶದ ಬದುಕಿಗಾಗಿ ತನ್ನ ಬದುಕನು ಸೀಳ್ವ,
ಹಿಂಸೆಯನಹಿಂಸೆಯಿಂ ಹಿಂಸಿಸದೆ ಕೊಲ್ವ,
ಸಮರ ಲೋಲನೆ ನಮ್ಮ ವೀರ ಸತ್ಯಾಗ್ರಹಿ !
ಪ್ರೇಮಾಗ್ನಿಯಿಂ ದ್ವೇಷದಗ್ನಿಯನು ಸುಟ್ಟು,
ದೇಹಶಕ್ತಿಯನಾತ್ಮಶಕ್ತಿಯಿಂ ಗೆದ್ದು,
ಬಗೆಯಲ್ಲಿ, ಬಾಯಲ್ಲಿ, ಕೈಯಲ್ಲಿ ಹಿಂಸೆಯನು
ಬಿಟ್ಟು ಹೋರುವ ಭಟನು ವೀರ ಸತ್ಯಾಗ್ರಹಿ !

ಸತ್ಯಾಗ್ರಹಿ

ಹೇಳದೆಯೆ ಕೇಳದೆಯೆ ದಳಪತಿಯು ನುಡಿದಂತೆ
ಮಾಡುವವನಾವನೋ ಅವನೆ ಸತ್ಯಾಗ್ರಹಿ;
ಕೋಪಿಸದೆ ಶತ್ರುವಿನ ರಭಸವಹ ಕೋಪವನು
ಸಹನೆಯಿಂ ಗೆಲ್ಲುವ ಪರಾಕ್ರಮಿಯು; ಬಲವಿರಲು
ಬಲುಮೆಯನು ತೋರದನು ದಿವ್ಯ ಸತ್ಯಾಗ್ರಹಿ!
ತನ್ನ ತಾಯಿಯ ಉಪ್ಪು ತನ್ನ ವಶದಲ್ಲಿರಲು
ಇತರರವು ನೋಯಿಸದೆ ತನ್ನ ಜೀವವ ತೆತ್ತು
ಕಾಯುವವನಾವನೋ ಅವನೆ ಸತ್ಯಾಗ್ರಹಿ!
ಎಂದಿಗೂ ಆಣೆಯಿಡದವನು ಸತ್ಯಾಗ್ರಹಿ!
ಎಂದಿಗೂ ಶಾಪಕೊಡದವನು ಸತ್ಯಾಗ್ರಹಿ!
ರಾಕ್ಷಸೀ ಬಲದಿಂದ ನಮ್ಮನಾಳುವ ಜನರ
ಹಳವಿಗೆಗೆ ಬಾಗದವನವನೆ ಸತ್ಯಾಗ್ರಹಿ!
ತನ್ನ ಗೌರವ ಕೆಡದ ರೀತಿಯಲಿ ನಡೆವವನು,
ತನ್ನ ಜಾಗಕೆ ತಾನೆ ಬಲು ಹೆಮ್ಮೆ ಪಡದವನು.
ಮರೆಯುದೆಯೆ ಹಡೆದ ಮಾತೆಯ ಸೇವೆಯನು, ಮಾಡಿ
ಮೌನದಿಂ ಮಡಿವವನು ಧನ್ಯ ಸತ್ಯಾಗ್ರಹಿ!
ಕಲಿಯುಗದ ಪ್ರಚ್ಛನ್ನ ಕಲ್ಕಿ ಸತ್ಯಾಗ್ರಹಿ!

೨೯-೪-೧೯೩೦

ಶ್ರಾವಣ ಸಂಧ್ಯಾಸಮೀರಣ

ಶ್ರಾವಣ ಸಂಧ್ಯಾಸಮಯ ಸಮೀರನು
ಅಮಂದಗಮನದಿ ಬರುತಿಹನು,
ಸುಯ್ಯನೆ ಬೀಸಿ ಬರುತಿಹನು!
ಪಡುಗಡಲಿನ ಪೆರ್ದೆರೆಗಳ ಗುಡಿಯಲಿ
ತುಂತುರುವನಿಗಳ ಕೂಡಾಡಿ,
ಬೆಳ್ನೊರೆಯುರುಳಿಯ ಚೆಲ್ಲಾಡಿ,
ಜಲನಿಧಿ ಘೋಷದಿ ಬರುತಿಹನು,
ಕಡಲಿನ ವಾರ್ತೆಯ ತರುತಿಹನು!
ಶ್ಯಾಮಲ ಪಲ್ಲವ ಸುಮ ಸಂಪೂಜಿತ
ಭೀಮನಿಬಿಡತರುರಾಜಿ ವಿರಾಜಿತ
ಮಲಯ ಸಹ್ಯವನ ಪರ್ವತ ಶಿಖರದಿ
ಯಾತ್ರೆಗೈದು ಪಾವನನಾಗಿ
ಪುಣ್ಯಪವನನು ಬರುತಿಹನು
ಧಾವಿಸಿ ಬರುತಿಹನು!
ಸುನೀಲ ಶ್ಯಾಮಲ ಜಲಧರ ಪಙ್ಕ್ತಿಯ
ತೇಲಿಸಿ ಶ್ರಾವಣ ವ್ಯೋಮದಲಿ,
ತಂಪನು ಸೂಸುತ, ತಣ್ಣನೆ ಬೀಸುತ,
ಸೋನೆಯ ಚಿಮುಕಿಸಿ ಭೂಮಿಯಲಿ,
ಮಂಗಳ ಪವನನು ಬರುತಿಹನು,
ಬೀಸಿ ಬರುತಿಹನು!
ಹಸರನೋಕರಿಪ ಜೋಳದ ಹೊಲದಲಿ
ತೊಳಲಿ ಚಿಮ್ಮಿ ಸರಸವನೆಸಗಿ,
ಸಾಲುಮುಗಿಲಿಂದುಣ್ಮಿ ಸೋರುತಿಹ

ಶ್ರಾವಣ ಸಂಧ್ಯಾಸಮೀರಣ

ಪಿಕರುತಿಗಂದಣವನು ಎಸಗಿ,
ಕೂದಲ ಕೆದರಿಹ ಈಚಲು ಮರಗಳ
ಮಿದುಳಿನಲಿ ಸುರಾಕ್ರೀಡೆಯನಾಡಿ,
ಅರಳಿ ಮರಗಳಲಿ, ಬಿದಿರು ಮೆಳೆಗಳಲಿ
ಮರ್ಮರ ಸಿಮಿಸಿಮಿ ಸದ್ದನು ಮಾಡಿ,
ಅಧ್ರುವವನು ತೂರಿ,
ಧ್ರುವದೆಡೆಯನು ತೋರಿ
ನೂತನ ಚೇತನ ದಾಯಕನು
ಶ್ರಾವಣ ತೋಯದ ನಾಯಕನು,
ಪುಣ್ಯ ಸಮೀರನು ಬರುತಿಹನು,
ಬೀಸಿ ಬರುತಿಹನು !

ಆಗಾಮಿಕ ಶ್ಯಾಮಲ ಆನಂದವ
ಭೂದೇವಿಯ ಅಂತಃಕರಣದಲಿ
ದೀಪನಗೈದೈತರುತಿಹನು,
ಸಮೀರ ಬರುತಿಹನು !

ಉತ್ಸಾಹದಿ ಅನುರಾಗದಿ ವೇಗದಿ
ಮುದಿಗನಸುಗಳನು ತೂರುತ್ತ,
ಹೊಸಗನಸನು ಮೊಳೆದೋರುತ್ತ,
ಪಾವನ ಪವನನು ಬರುತಿಹನು,
ಜೀವವ ತರುತಿಹನು !

ಅಸ್ತಾಚಲ ಶೃಂಗಸ್ಥ ದಿನೇಶನ
ತಪ್ತ ಸುವರ್ಣ ಜ್ಯೋತಿಯು ಹೊದೆದಿಹ
ನೀರಾಕರದಲಿ ವೀಚಿಯ ವಿರಚಿಸಿ,
ಹರ ಹರ ಹರ ಹರ ನಿನದವ ನಿರ್ಮಿಸಿ

ಶ್ರಾವಣ ಸಂಧ್ಯಾಸಮಯ ಸಮೀರನು
ಅಮಂದಗಮನದಿ ಬರುತಿಹನು,
ಸುಯ್ಯನೆ ಬೀಸಿ ಬರುತಿಹನು !

ಶ್ರಾವಣ ಸಂಧ್ಯಾಸಮಯ ಸಮೀರ,
ಸ್ವಾಗತ ನಿನಗೆ, ಪಯೋಧಿಯ ವೀರ !
ಸ್ವಾತಂತ್ರ್ಯದ ರುಚಿಯರಿತಿಹ ಧೀರ,
ಸ್ವಾತಂತ್ರ್ಯದ ಸಂದೇಶವ ತಾರ !
ಮುಕ್ತ ಸಮೀರ, ಬಾರಾ ! ಬಾರಾ !
ಸತ್ಯಾಗ್ರಹವನು ನೀನೂ ಸೇರಾ !
ಸೆರೆಮನೆಗಾದರು ಬಲ್ಲವರೆಲ್ಲ,
ಸೇನೆಯ ನಡೆಸಲು ಬಲ್ಲಿದರಿಲ್ಲ,
ದಳಪತಿಯಾಗ್ಬೆ ನೀನೆಮಗೆಲ್ಲ !
ಬಾರ, ಸಮೀರ, ಮುಕ್ತಿಯ ಮಲ್ಲ !
ಹನುಮನ ಹೆತ್ತವ ನೀನಲ್ತೆ ?
ಭೀಮನ ಹಡೆದವ ನೀನಲ್ತೆ ?
ಕಡಲೊಡಲಿನ ಬಡಬಾಗ್ನಿಯ ರೌದ್ರವ
ನಮ್ಮೊಡಲಲಿ ಕೆರಳಿಸಿ ಬಾರ !
ಸುಳಿಗಾಳಿಗೆ ಭೋರ್ಗರೆವ ಸಮುದ್ರವ
ನಮ್ಮೆದೆಗಳಲುರುಳಿಸಿ ಬಾರ !
ಮುಂಗಾರ್ಮೊಳಗನು ಗುಡುಗನು ಮಿಂಚನು
ನಮ್ಮೆದೆಗೂಡುತ ನೀ ಬಾರ !
ವಿಪ್ಲವ ಮೂರ್ತಿಯ ಕಲ್ಲೋಳಸಂಚನು
ತುತ್ತೂರಿಯಊದುತ ನೀ ಬಾರ !
ಶ್ರಾವಣ ಸಂಧ್ಯಾಸಮಯ ಸಮೀರ !
ಸ್ವಾಗತ, ಬಾರ, ಧೀರರ ಧೀರ !

೨೮-೭-೧೯೩೦

ಜಡವಾದಿ

ಉರುಳುರುಳು ಹಗಲಿರುಳು
ಸುಂದರ ವಸುಂಧರಾ !
ಕಾಲದೇಶಗಳೆಂಬ
ಎರಡು ದಡಗಳ ತುಂಬ
ಹರಿವ ಬಾಳಿನ ಹೊಳೆಯು
    ಹೊನಲಿನಲಿ ಸಿಕ್ಕಿ
    ಸೆಳವಿನಲಿ ಸುಕ್ಕಿ
ಉರುಳುರುಳು ಹಗಲಿರುಳು
ಎಲೆ ಧರಣಿ ನಿಷ್ಕರುಣಿ !
    ನೀನಲ್ತೆ ತರುಣಿ ?

ಆಕಾಶ ಜಲಧಿಯಲಿ
ಈಜೀಜು ಬಿರುಬಿನಲಿ ;
ಸೂರ್ಯದೇವನ ಸುತ್ತ
ಸಂಚರಿಸದತ್ತಿತ್ತ
ಎಳೆದ ಗೆರೆಯೊಳೆ ತಿರುಗು.
ನೀನೆಮಗೆ ತಾಯಲ್ತೆ ?
ತಾಯಾದರೇನಂತೆ
ಮೋಹಾರಿಗೋ ದಾಸಿ !
ಓ ದಾಸಿ, ನರ್ತಕಿಯೆ,
    ಎಲೆ ಭೂಮಿರಾಣಿ,
ನೀನಳಲ ಹೊರೆಹೊರುವ
    ಬರಿ ದೊಡ್ಡ ದೋಣಿ !

ತಾಯಂತೆ ? ತಾಯಂತೆ !
ಮಂಕರಾ ಭಾವುಕರು
ಕನಸುಣಿಗಳಾದವರು
ನೀನೆಮಗೆ ತಾಯೆಂದು
ಚೀರುತಿಹರಲ್ಲ !
ನೀ ದಾಸಿ ಎಂಬುದನು
ಜಡವಾದಿ ಬಲ್ಲ.
ನೀನೆ ಕೈಯಿತ್ತೆಮಗೆ
ಕೊಟ್ಟುದೇನಿಹುದು ?
ನೀನೆ ಕೃಪೆ ಮಾಡೆಮಗೆ
ಬಿಟ್ಟುದೇನಿಹುದು ?
ನಾವು ಸುಲಿದರೆ ಉಂಟು
ನಿನ್ನ ಬಸಿರಿನ ಗಂಟು.
ನಾವು ಬೇಡಿದರೆಮಗೆ
ಬರಿ ಕಲ್ಲು, ಮಣ್ಣು.
ಹೆಚ್ಚು ಎಂದರೆ ಬನವು
ಉಗುಳುವಾ ಹಣ್ಣು !

ಉರುಳುರುಳು ಹಗಲಿರುಳು
ಎಲೆ ಧರಣಿ, ನಿಷ್ಕರುಣಿ,
ತೆರೆದ ಕಣ್ಣನು ಮುಚ್ಚಿ,
ಕಿವುಡಾಗಿ ವಿಷನು ಚುಚ್ಚಿ,
ಎಲ್ಲರೆದೆಗಳ ಚುಚ್ಚಿ,
ಉರುಳುರುಳು ಹಗಲಿರುಳು
ಓ ದಾಸಿ ! ಓ ಹುಚ್ಚಿ !
ಬರಿ ಭ್ರಾಂತಿ ಆ ಶಾಂತಿ !

ಕರ್ಣನಿಗೆ ಆ ಕುಂತಿ
   ತಾಯೆಂತೊ ಅಂತೆ,
ಓ ಭೂಮಿ, ನೀನೆಮಗೆ
   ತಾಯಲ್ತೆ ಅಂತೆ?
ಮನುಜರೆಂಬುವ ಕುರಿಯ
ಮಂದೆಯನು ಕಾಯುವಾ
   ಓ ಕುರುಬಗಿತ್ತಿ,
ವಸೌಢ್ಯಮುಢ್ಯವ ನೀಡಿ
ಕುರಿಗಳೆಲ್ಲವ ಕೂಡಿ
ಕೊಬ್ಬುವಂದದಿ ಮಾಡಿ
ಕಡೆಗೆಲ್ಲಿಯೋ ನಡುವೆ
   ಕುತ್ತಿಗೆಗೆ ಕತ್ತಿ!
ಹಗಲಿನಾಸರ ಕಳೆಯೆ
   ಇರುಳ ತರುವೆ;
ಇರುಳಿನಾಸರ ಕಳೆಯೆ
   ಹಗಲ ತರುವೆ!
ನಿನ್ನ ಮಕ್ಕಳೆ ನಿನಗೆ
   ಹಾದಿಯಲಿ ಬುತ್ತಿ!
ನೀನೊ ಬರಿ ಸೆರೆಯಾಳು;
ನಾವ್ ನಿನಗೆ ಬಂಕೂಳು!

ಉರುಳುರುಳು ಹಗಲಿರುಳು
ಸುಂದರ ವಸುಂಧರಾ!
ಬನದ ವೇಷವನುಟ್ಟು
ಬೆಟ್ಟ ಹೊಳೆಗಳ ತೊಟ್ಟು

ಹೊಟ್ಟೆಯೊಳಗಿರೆ ಗುಟ್ಟು,
    ಕಿಚ್ಚೊಡಲ ಗುಟ್ಟು,
ಮೇಲೆ ನಗೆಮೊಗ ತೋರಿ
ಒಳಗಿರುವ ರೌದ್ರವನು
ಲಾಲಿತ್ಯದಲಿ ಮುಚ್ಚಿ,
ಕೋರೆದಾಡೆಯ ದನಿಯ
ಖಗಗಳೆಂಬುವ ಹೊಗಳು-
ಭಟ್ಟರಾ ಗಾನದಲಿ
ಮುಳುಗುವಂದದಿ ಮಾಡಿ,
ಉರುಳುರುಳು ಹಗಲಿರುಳು,
ಸುಂದರ ವಸುಂಧರಾ !

ಏನಾದರೇನಂತೆ ?
    ನಿನಗದೇನಂತೆ !
ಯಾರು ಹುಟ್ಟಿದರೇನು ?
ಯಾರು ಸತ್ತರೆ ಏನು ?
ನಿನ್ನ ಕಂಬಿಯ ಮೇಲೆ
ನೀನುರುಳು ದಾಸ್ಯದಲಿ ;
ನಾ ಕುಳಿತುಕೊಂಡಿಲ್ಲಿ
ಕರತಾಳ ಹಾಕುವೆನು
    ಬಲ್ಲ ಹಾಸ್ಯದಲಿ !
ತಿಳಿಯದಿಹ ಮುಂಕರಿಹ
    ಈ ವಿಶ್ವದಲ್ಲಿ,
ಬರಿಯ ಬಯಲಿಗೆ ಕೈಯ
    ಮುಗಿಯುವವರಲ್ಲಿ

ನಾವಿಬ್ಬರಿಹೆವ್ವೈಸೆ
   ತಿಳಿದ ಕಪಟಿಗಳು :
ಗುಟ್ಟನಡಗಿಸಿ ನಡೆವ
   ನೀನೊಬ್ಬ ಕಪಟಿ ;
ಗುಟ್ಟ ತಿಳಿದುಸಿಕನಿಹ
   ನಾನೊಬ್ಬ ಕಪಟಿ !

ತಾಯಿ ಚೊಚ್ಚಲ ಮಗುವ
   ನಲ್ಮೆಯಲಿ ಹೆತ್ತು,
ತುಂಬು ಮೊಲೆಯನು ಕೊಟ್ಟು,
ಕೆನ್ನೆಯಲಿ ಮುತ್ತಿಟ್ಟು
ನಲಿಯುವಾ ವೇಳೆಯಲಿ
ಎಲ್ಲಿಂದಲೋ ಮಿತ್ತು
ಓಡೋಡುತೈತಂದು
ಹೊತ್ತ ಶಿಶುವನು ಕಿತ್ತು
ಹಿಸಿದು ತಿಂಬುದ ಕಂಡು
   ತಾಯಿ ಗೋಳಿಡಲು,
ಬೀಳುತಿರೆ ನಿನ್ನಡಿಗೆ
   ಕಣ್ಣೀರ ಕಡಲು ;
ನಿನ್ನ ಕಂಬಿಯ ಮೇಲೆ
   ನೀನುರುಳು ಧರಣಿ :
ನಿನ್ನ ವಿಟನದೊ ಅಲ್ಲಿ
   ಹೊಳೆಯುವನು ತರಣಿ !

ಬಂದು ರಾಜ್ಯವ ಗೆದ್ದು,
ಸಿರಿಯನೆಲ್ಲವ ಕದ್ದು,

ಬಲವಂತರಾದವರು
ಬಲವಿಲ್ಲದವರುಗಳ
    ತುಳಿಯುತಿರಲು,
ಜನರ ಮೊರೆ ಬಾನೆಡೆಗೆ
    ಮುಟ್ಟುತಿರಲು,
ಉರುಳುರುಳು ಹಗಲಿರುಳು
ಎಲೆ ಧರಣಿ ! ನಿಷ್ಕರುಣಿ !
ಕುರಿ ಕುರಿಯ ತಿಂದರದು
ಕುರುಬನಿಗೆ ಕೇಡಲ್ತೆ !
ತಿಂದ ಕುರಿ ತಿಂಬ ಕುರಿ
ಕುರುಬಗೆರಡುಣಿಸಲ್ತೆ?
ಎಲೆ ಧರಣಿ, ನಿಷ್ಕರುಣಿ,
    ನೀನೆಂಥ ಮಾರಿ !
ಓ ಮಂಕು ನರಗುರಿಯೆ,
ಭೂಮಿ ಬರಿ ದೋಣಿ ಕಣೊ !
ತಾಯ ಮಡಿಲೆಂದೇಕೆ
ಬರಿದೆ ಬೆಮೆಗೊಂಡಿರುವೆ?
ಜಡವು ಜಡವನು ಹೊತ್ತು
ಜಡವು ಜಡವನು ಹೆತ್ತು
ಜಡವು ಜಡದಲಿ ಮುಳುಗಿ
    ಹೋಗುವುದೆ ಮಿತ್ತು !
ಹುಸಿ ಜಡವ ನಂಬುವರೆ
    ಚೇತನಂಗೆತ್ತು ?
ಕಡೆಗೆ ಭೂಮಿಯೆ ನಮಗೆ
    ಕಡೆಯ ಸುಡುಗಾಡು.

ತಾಯ ಮಡಿಲೇ ನಮಗೆ
ಮಸಣದಾ ಸೂಡು !
ತಿರೆಯ ಬಸಿರದು ಬರಿಯ
ಬಲ್ಮಸಣವಲ್ತೆ ?
ಯುಗಯುಗಗಳಡಗಿರುವ
ಹಿರಿ ಗೋರಿಯಲ್ತೆ ?
ಚಕ್ರಾಧಿಪತ್ಯಗಳು,
ಚಕ್ರವರ್ತಿಗಳು,
ನಾಗರಿಕ ದೇಶಗಳು,
ನಾಗರಿಕತೆಗಳು,
ಕ್ರಿಸ್ತ ಬುದ್ಧರು, ರಾಮ
ಕೃಷ್ಣಾವತಾರಗಳು,
ವಾಲ್ಮೀಕಿ ವ್ಯಾಸಾದಿ
ಕವಿವರರು ಯೋಗಿಗಳು,
ಚಿರಜೀವಿಗಳು ಎಂದು
ಪ್ರಖ್ಯಾತರಾಗಿರುವ
ಹನುಮ ಅಶ್ವತ್ಥಾಮ—
ಎಲ್ಲ ಮಣ್ಣಾಗಿಹರು
ಭೂಮಾತೆಯೊಡಲೊಳಿಹ
ಬಸಿರ ಮಸಣದಲಿ !

ಸವಿಗನಸುಗಳು ಸಿಡಿದು
ಹಾಳಾಗುತಿರಲಿ !
ಉರುಳುರುಳು ಹಗಲಿರುಳು
ಓ ಭೂಮಿ ರಾಕ್ಷಸಿಯೆ !

ನರರ ಗೋಳನು ಕೇಳಿ
　　ಮರುಗದೆಯೆ ಉರುಳು ;
ನಾಗರಿಕತೆಗಳಳಿಯೆ
　　ಲಕ್ಷಿಸದೆ ಹೊರಳು ;
ಬೇಲೂರು ಹಳೆಬೀಡು
ಹಾಳಾದರೇನಂತೆ ?
　　ನೀನುರುಳು ಉರುಳು ;
ಶ್ರೀ ಗೋಮಟೇಶ್ವರನು
ಗಾಳಿ ಮಳೆಯುಲಿ ಕರಗಿ
　　ಹೋದರೇನುರುಳು ;
ವೇದ ಸಂಸ್ಕೃತಿಯುಳಿದು
　　ಹೋದರೇನುರುಳು ;
ಭರತಖಂಡವು ಬೂದಿ
　　ಆದರೇನುರುಳು !
ತುಂಗೆ ಹರೆಯುಲಿ, ಉರುಳು !
ಗಂಗೆ ನಿಲ್ಲಲಿ, ಉರುಳು !
ಉರುಳುರುಳು ಹಗಲಿರುಳು
ಸುಂದರ ವಸುಂಧರಾ !

೨೯–೧೧–೧೯೩೦

ರಕ್ತಧುನಿ

ಬರುತಲಿದೆ ! ಬರುತಲಿದೆ !
ವಿಪ್ಲವದ ರಕ್ತಧುನಿ,
ನೋಡು, ಹರಿದು ಬರುತಿದೆ !
ಬೇನೆವಸಿರಿನಿಂದ ಚಿಮ್ಮಿ,
ದಾಸ್ಯಶಿಲೆಯನೊಡೆದು ಹೊಮ್ಮಿ,
ಶ್ರೀಮಂತರ ಕೊಳಕ ಬಿಚ್ಚಿ,
ಹಳತನೆಲ್ಲ ಕೊಚ್ಚಿ ಕೊಚ್ಚಿ,
ನೋಡು, ನುಗ್ಗಿ ಬರುತಿದೆ !
ಮರಣದಂತೆ ಮೌನವಾಗಿ
ವಿಲಯದಂತೆ ರೌದ್ರವಾಗಿ
ಗುಡುಗನುಳಿದ ಸಿಡಿಲಿನಂತೆ
ಹೊಳೆವ ಮಿಂಚಿನುದಧಿಯಂತೆ
ಕಾಳಿ ತೆರೆದ ಜಿಹ್ವೆಯಂತೆ
ತರುಣರಕ್ತದರುಣನದಿ
ವಿಪ್ಲವದ ರಕ್ತಧುನಿ
ಬರುತಲಿದೆ ! ಬರುತಲಿದೆ !
ನೋಡು ! ನೋಡು ! ಬರುತಿದೆ !
ತಡೆವ ಧೀರರಾರು ? ಬನ್ನಿ !
ಕುಡಿವ ವೀರರಾರು ? ಬನ್ನಿ !
    ಬನ್ನಿ ಮುಂದಕೆ !
ಈಜಿ, ಈಜಿ ದಡವ ಸೇರಿ,
    ಬಲುಮೆಯುಳ್ಳೊಡೆ ;

ಬೆದರುವೊಡೆ, ಬೆಚ್ಚುವೊಡೆ,
  ಮುಳುಗಿ ಸಾಯಿರಿ !
ಮುತ್ತ ಮರಗಳನೆಲ್ಲ
  ಒತ್ತಿ ಮುರಿಮುರಿದು,
ಮುತ್ತ ಗುಡಿಗಳನೆಲ್ಲ
  ಕಿತ್ತು ತೆಗೆದೊಗೆದು,
ರುಂಡಗಳನು ಮುಂಡಗಳನು
ರಭಸದಲ್ಲಿ ತೇಲಿಸುತ್ತ,
ರಾಜ್ಯಗಳ ಗುಡಿಸುತ್ತ,
ರಾಜರನು ಬಡಿಯುತ್ತ,
ಮುಕುಟಗಳನು ತುಳಿಯುತ್ತ
ಗದ್ದುಗೆಗಳನಳಿಸುತ್ತ
ಬರುತಲಿದೆ ! ಬರುತಲಿದೆ !
ವಿಪ್ಲವದ ರಕ್ತಧುನಿ
ನೋಡು, ಹರಿದು ಬರುತಿದೆ !

ಕೆಂಪುಗಗನವದರ ಬರವ,
ನೋಡು, ಅದೋ ತೋರುತಿದೆ !
ಬಿರುಸುಗಾಳಿಯದರ ಬರವ,
ಕೇಳು, ಅದೋ ಸಾರುತಿದೆ !
ಸಿಡಿವ ಮದ್ದಿನುಂಡೆಯಂತೆ,
ಹಾರಲಿಹ ಫಿರಂಗಿಯಂತೆ,
ಒಡೆಯಲಿರುವ ಬಾಂಬಿನಂತೆ,
ವಿಪ್ಲವದ ಕೇಸರಿಯು
ರಕ್ತಪಾನಕೆಳಸಿ, ಎಳಸಿ

ಹೊರಗೆ ನೆಗೆಯೆ, ನರಳಿ, ಕೆರಳಿ,
ಸಿದ್ಧವಾಗುತಿರುವುದು,
ಪ್ರಬುದ್ಧವಾಗುತಿರುವುದು !

ನೋಡದೋ ! ಕಾಣೆಯಾ ?
ಕಬ್ಬಿಗನ ಲೇಖನಿಯು
ಕಠಾರಿಯಾಗುತಿರುವುದು !
ಇಂಚರದ ಕೊಳಲು ಬಿರಿದು
ಕಠೋರ ಭೇರಿಯಾಗುತಿದೆ !
ಚೆಲುವೆಯರ ಮುಗುಳ್ನಗೆಯು
ಮರುಳ್ನಗೆಯದಾಗುತಿದೆ !
ದೇಶಭಕ್ತರೆದೆಗಳಿಂದ
ಸೋರ್‍ವ ನೆತ್ತರೆಲ್ಲ ಸೇರಿ,
ವೀರಸತಿಯರಕ್ಷಿಗಳ
ಶೋಣಿತಾಶ್ರು ನದಿಯು ಸೇರಿ,
ಕ್ರೋಧದಿಂದ, ವೇಗದಿಂದ,
ಸಿರಿಮನೆಗಳನುರುಳಿಸಿ
ಬಡಜನರನು ಕೆರಳಿಸಿ
ಬರುತಲಿದೆ ! ಬರುತಲಿದೆ !
ವಿಪ್ಲವದ ರಕ್ತಧುನಿ
ನೋಡು, ನೋಡು, ಅದೋ ನೋಡು
ಹರಿದು ಬರುತಿದೆ !

೨೩-೧೧-೧೯೨೯

ಕವಿ

ವಸಂತವನದಲಿ ಕೂಗುವ ಕೋಗಿಲೆ
  ರಾಜನ ಬಿರುದನು ಬಯಸುವುದಿಲ್ಲ;
ಹೂವಿನ ಮಠದಲಿ ಜೇನುಂಬುಳುಗಳು
  ಮೊರೆವುದು ರಾಜನ ಭಯದಿಂದಲ್ಲ.
ವನದೇಕಾಂತದಿ ಪೆಣ್ನವಿಲೆಡೆಯಲಿ
ಮಯೂರನೃತ್ಯೋನ್ಮತ್ತ ವಿಲಾಸಕೆ
  ರಾಜನ ಕತ್ತಿಯ ಗಣನೆಯೆ ಇಲ್ಲ;
ನಿದಾಘವ್ಯೋಮದಿ ಮೆಲ್ಲಗೆ ಮೆಲ್ಲಗೆ
ತನ್ನೊಂದಿಚ್ಛೆಗೆ ತೇಲುವ ಮೇಘದ
  ಆಲಸ್ಯಕೆ ಅರಸನ ಅಳುಕಿಲ್ಲ.
ಗಾಳಿಯ ಮುತ್ತಿಗೆ ಮೈ ಜುಮ್ಮೆನ್ನಲು
ತೆರೆತೆರೆತೆರೆಯಹ ತಿಳಿಗೊಳದೆದೆಯಲಿ
ಮಿನುಮಿನು ಮಿಂಚುವ ನುಣ್ಬೆಳುದಿಂಗಳ
  ಲೀಲೆಗೆ ದೊರೆಮೆಚ್ಚುಗೆ ಬೇಕಿಲ್ಲ;
ಸಿಡಿಲನು ಸಿಡಿಯುತೆ ಮೊಳಗುತೆ ನುಗ್ಗುವ
ಕಾರ್ಗಾಲದ ಕರ್ಮುಗಿಲಿಂ ಹೊಮ್ಮುವ
ಕೆಂಗಿಡಿ ಬಣ್ಣದ ಹೊಂಗೆರೆ ಮಿಂಚಿಗೆ
  ಆಸ್ಥಾನದ ದಾಸ್ಯದ ಹುರುಪಿಲ್ಲ.
ಕತ್ತಲೆ ಮುತ್ತಿದ ಬಾನಲಿ ಮಿಣುಕುವ
  ತಾರೆಗೆ ದೊರೆಯಾಣತಿ ತೃಣವಿಲ್ಲ.
ವಿಪ್ಲವ ಮೂರ್ತಿಯು ಸಖನಾಗಿಹನೈ :
  ಕವಿಗರಸುರಗಿರಸುಗಳ ಋಣವಿಲ್ಲ !
    ಅವನಗ್ನಿಮುಖಿ !
      ಪ್ರಲಯಶಿಖಿ !

೯-೧-೧೯೩೮

ಭರತಮಾತೆ

ಅಯ್ಯೊ ನಾನೆ ತಿಳಿಯದಂತೆ
ನನಗೆ ಮುಕ್ತಿ ದೊರಕಿತಂತೆ !
ಎಂಥ ಮುಕ್ತಿಯೋ ?-ಅದು
ಎಂಥ ಮುಕ್ತಿಯೋ !
ಮೈಯಲುಗಿಸ ಬಾರದಂತೆ ;
ಕೈಯಲುಗಿಸ ಕೂಡದಂತೆ ;
ಪಕ್ಕದೊಳಿರುವಕ್ಕನೊಡನೆ
ನುಡಿಯೆ ಹಕ್ಕೆ ಇಲ್ಲವಂತೆ !
ಅಂತು ನನಗೆ ಮುಕ್ತಿಯಂತೆ !
ಎಂಥ ಮುಕ್ತಿಯೋ ?-ಅದು
ಎಂಥ ಮುಕ್ತಿಯೋ !

ಸರಪಣಿಗಳು ಎಂದಿನಂತೆ
ಮೈಯ ಸುತ್ತಿವೆ !
ಕಬ್ಬಿಣವದು ಕಾಣದಂತೆ
ಹೂವು ಮುತ್ತಿವೆ !
ಹೊಟ್ಟೆ ಬರಿದು ; ಹಿಟ್ಟೆಯಿಲ್ಲ.
ಮೈ ಬತ್ತಲೆ ; ಬಟ್ಟೆಯಿಲ್ಲ.
ನನ್ನ ನಾನೆ ಪೊರೆಯುವಂತೆ
ನನಗೆ ಶಕ್ತಿ ದೊರಕಿತಂತೆ !
ಎಂಥ ಶಕ್ತಿಯೋ ?-ಅದು
ಎಂಥ ಶಕ್ತಿಯೋ !

ಮೊಗದೊಳೆಸಕ ಮಿಂಚಲಿಲ್ಲ;
ಕಣ್ಗೆ ಹೊಳಪು ಬಾರಲಿಲ್ಲ;
    ಬಾಳಿಗೋ ಬೆಳಕೆ ಇಲ್ಲ;
    ಏನೆಂತೊ ಕೇಳ್ವರಿಲ್ಲ!
ನನಗೆ ಸಿರಿಯು ಬಂದಿತಂತೆ,
ನಾನೆ ಅದನು ಅರಿಯೆನಂತೆ!
    ಎಂಥ ಸಿರಿಯದೋ?-ಅದು
    ಎಂಥ ಸಿರಿಯದೋ!

ತಲೆಯ ಹೊರೆಯು ಇಳಿಯಲಿಲ್ಲ;
ಎದೆಯ ಬೇನೆ ಅಳಿಯಲಿಲ್ಲ;
ಅಡಿಯ ಬೇಡಿ ಒಡೆಯಲಿಲ್ಲ;
ದುಡಿವ ದಾಸ್ಯ ಬಿಡಲೆ ಇಲ್ಲ!
ನನ್ನ ಸುತ್ತಮುತ್ತ ಮುತ್ತಿ
ನಿಂತಿರುವರು ಕತ್ತಿಯೆತ್ತಿ!
ಅಂತು, ನಾನೆ ತಿಳಿಯೆನಂತೆ!
ನನಗೆ ಮುಕ್ತಿ ದೊರಕಿತಂತೆ!
    ಎಂಥ ಮುಕ್ತಿಯೋ?-ಇದು
    ಎಂಥ ಮುಕ್ತಿಯೋ!
ನನ್ನನಾಳ್ವನೊಡ್ಡಿದ ಬೆಲೆ!-ಇದು
    ಬರಿ ಕುಯುಕ್ತಿಯೋ!

೭-೩-೧೯೪೮

ಇಂದಿನ ದೇವರು

ನೂರು ದೇವರನೆಲ್ಲ ನೂಕಾಚೆ ದೂರ
ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರ !

ಶತಮಾನಗಳು ಬರಿಯ ಜಡಶಿಲೆಯ ಪೂಜಿಸಾಯ್ತು ;
ಹಾವ್ಗಳಿಗೆ ಹಾಲೆರೆದು ಪೋಷಿಸಾಯ್ತು !
ಬಿಸಿಲು ಮಳೆ ಗಾಳಿ ಬೆಂಕಿಯನೆಲ್ಲ ಬೇಡಿಯಾಯ್ತು ;
ದಾಸರನು ಪೂಜಿಸಿಯೆ ದಾಸ್ಯವಾಯ್ತು !

ಗುಡಿಯೊಳಗೆ ಕಣ್‌ಮುಚ್ಚಿ ಬೆಚ್ಚಗಿರುವರನೆಲ್ಲ,
ಭಕ್ತ ರಕ್ತವ ಹೀರಿ ಕೊಬ್ಬಿಹರನೆಲ್ಲ,
ಗಂಟೆ ಜಾಗಟೆಗಳಿಂ ಬಡಿದು, ಕುತ್ತಿಗೆ ಹಿಡಿದು
ಕಡಲಡಿಗೆ ತಳ್ಳಿರೈ ಶಂಖದಿಂ ನುಡಿದು !

ನಿದ್ದೆ ಮಾಡುತ್ತಿಹರು ಹಲವು ದೇವತೆಗಳೆಲ್ಲ ;
ಬಿದ್ದವರು ಕಲ್ಲಾಗಿ ಕೆಲವರಿಹರು ;
ಕ್ಲೀಬತನದಲಿ ಮರೆತು ತಮ್ಮ ಪೌರುಷವನೆಲ್ಲ
ಸತ್ತಿಹೋದಂತಿಹರು ಮತ್ತುಳಿದಮರರು.

ಅವರ ಗುಡಿ ಹಾಳಾಯ್ತು ; ಅವರ ನುಡಿ
ಮಡಿದುಹೋಯ್ತು ;
ಅವರ ನೆಮ್ಮಿದ ನಮಗೆ ಬೀಳುಗತಿಯಾಯ್ತು !
ಮುಂದಿವಳನಾರಾಧಿಸುವ, ಶಕ್ತಿಯಾರ್ಜಿಸುವ ;
ಒಂದು ಶತಮಾನವನು ಒಂದೆ ದಿನ ಜೈಸುವ !

ಸತ್ತ ಕಲ್ಲಗಳ ಮುಂದೆ ಅತ್ತು ಕರೆದುದು ಸಾಕು,
ಜೀವದಾತೆಯನಿಂದು ಕೂಗಬೇಕು !
ಶಿಲೆಯ ಮೂರ್ತಿಗೆ ನೆಯ್ದ ಕಲೆಯ ಹೊದಿಕೆಯನೊಯ್ದು
ಚಳಿಯು ಮಳೆಯಲಿ ನವೆವ ತಾಯ್ಗೆ ಹಾಕು !

ಭಾರತಿಯೆ ನಮಗಿಂದು ಜೀವನದ ದೇವತೆಯು,
ವಿಶ್ವರೂಪಿಣಿಯವಳು, ವಿಶ್ವಮುಖಿಯೈ !
ನಮ್ಮೆಲ್ಲರಂಗಗಳೆ ನಮ್ಮಂಬೆಯಂಗವೈ,
ನಮ್ಮ ಸ್ವಾತಂತ್ರ್ಯದೊಳೆ ನಮ್ಮಮ್ಮ ಸುಖಿಯೈ !

ಇಂದೊ ನಾಳೆಯೊ ದಾಸನೀಶನಾಗಲೆ ಬೇಕು,
ಎಂದಿಂದೆ ಎದ್ದೇಳಿ ; ನಾಳೆಯೆನೆ ಹೋಕು !
ನಾವೆ ದೇವತೆಗಳೈ ! ಭಾರತವೆ ಸ್ವರ್ಗವೈ !
ಭಾರತಾಂಬೆಯೆ ನಮಗೆ ದೇವಿಯೈ, ಜನನಿ !

೨-೬-೧೯೩೧

ಆತ್ಮಶ್ರದ್ಧೆ

ಎಷ್ಟು ದೇವರ ನೀನೆಷ್ಟು ನಂಬಿದರೇನೊಂ-
ದಿಷ್ಟು ನೀ ನಂಬದಿರೆ ನಿನ್ನ ನೀನು ?

ಹತ್ತು ಸಾವಿರ ಜನರು ಸುತ್ತಲಿದ್ದೊಡವೇನು
ಚಿತ್ತಹತ್ಯಕೆ ಯಾರು ತಡೆಯ ಕಟ್ಟುವರಯ್ಯ ?
ಹೆರರ ಕೊಲ್ಲಲು ಕತ್ತಿ ಪರಶು ತೋಮರ ಬೇಕು ;
ತನ್ನ ಕೊಲ್ಲಲು ಸಣ್ಣದೊಂದು ಸೂಜಿಯೆ ಸಾಕು !

ಶ್ರದ್ಧೆಯಿಂದಲೆ ಸೂರ್ಯ ಗಗನದೇಶದಿ ನಿಂತು
ನೂರು ಲೋಕವ ಹಿಡಿವ ಶಕ್ತಿ ಪಡೆದಿಹನಯ್ಯ :
ಶ್ರದ್ಧೆಯಿರುವುದೆ ನಾಕ, ಅಶ್ರದ್ಧೆಯೇ ನರಕ ;
ಶ್ರದ್ಧೆಯಿದ್ದರೆ ಕೋಟಿ ದೇವರೆಮಗಾಳಯ್ಯ !

ಮಾನವನೆ ದೇವತೆಯು ; ನರನೆ ನಾರಾಯಣನು ;
ನಮ್ಮ ವಿಶ್ವಕೆ ನಾವೆ ನಿರುಪಮಾದ್ಭುತವಯ್ಯ !
ಕ್ರಿಸ್ತ ಬುದ್ಧರು ಎಲ್ಲ 'ಅಹಮಸ್ಮಿ' ಸಾಗರದಿ
ಮಿಂಚಿ ಮುಳುಗುವ ಬರಿಯ ಕಿರಿಯ ಬುದ್ಬುದವಯ್ಯ !

೩-೭-೧೯೩೧

ಮಲ್ಲಗೀತೆ

ಒಳ್ಳಿತಾಗುವುದೆಲ್ಲ!
ಬೇವು ತುದಿಯಲಿ ಬೆಲ್ಲ!
ಮುಂದೆ ನಡೆ, ತೀರ್ಥವಿಹುದೆಲ್ಲ ಹಾದಿಗಳು ಕೂಡುವೆಡೆಯಲ್ಲಿ!
ಬೆಳ್ಳಗಿರೆ ಹಾಲಲ್ಲ;
ಬಲ್ಲವನೆ ತಾ ಬಲ್ಲ;
ಕೇಳಯ್ಯ ನಾನೊಬ್ಬ ಮಲ್ಲನೀ ಜೀವನದ ಗರಡಿಯಲ್ಲಿ!

ಕಾವಿಯೋ ಖಾದಿಯೋ?
ಅಂತವೋ ಆದಿಯೋ?
ಯಾವುದೋ ಹಾದಿಯೊಂದನು ಹಿಡಿದು ನಡೆಯಲಿದ್ದೆಡೆಯೆ ಸಿದ್ಧಿ!
ಎಲ್ಲ ನದಿಗಳು ತುದಿಗೆ
ಜಾರುವುವು ಜಲನಿಧಿಗೆ
ಎಂಬ ತತ್ವವ ತಿಳಿದು ಸಮತೆಯಲಿ ಸಾಗುವುದೆ ಯೋಗಬುದ್ಧಿ!

ಸೋದರನೆ ಬಿಸಿಲಿಹುದೆ?
ಹಾದಿಯಲಿ ಕೆಸರಿಹುದೆ?
ಹೊರೆ ಭಾರವಾಗಿಡೆಯೆ? ನೆರೆಯ ಕರೆದವನ ಕೈಗದನು ನೀಡು.
ನಿದ್ದೆಗಳೆದಾ ವೇಳೆ
ಮತ್ತೆ ಬೆನ್ನಿನ ಮೇಲೆ
ಹೊತ್ತು ನಡೆ ಕರ್ತವ್ಯವನು; ಮರಳಿ ಬಳಲಿದರೆ ನಿದ್ದೆ ಮಾಡು!

ನೆರೆವಿಾವ ಮಿತ್ರನೈ.
ಜೊತೆ ದುಡಿವ ಪುತ್ರನೈ.
ಯಜಮಾನನಿಗೆ ನೀನು ಹೊರೆಹೊರುವ ಕತ್ತೆಯೊಲು ದಾಸನಲ್ಲ !
ನಿನ್ನ ಸಾಹಸವೆಲ್ಲ
ಅವನದಲ್ಲದೆ ಇಲ್ಲ ;
ಗುಡಿಯ ಕಟ್ಟುವರೂ ಕಡೆಗೆ ದೇವರಹರಿದಕೆ ಮೋಸವಿಲ್ಲ !

ನಾಕ ನರಕಗಳಿಲ್ಲ
ಪಾಪ ಪುಣ್ಯಗಳಿಲ್ಲ
ನಮ್ಮಾಶೆ ಭಯಗಳಲಿ ನಿಂತಿಹವು ತಮಗಿರದ ಕಾಲನೂರಿ !
ಒಂದು ಕಲ್ಲನು ಕಡೆದೆ ;
ಏನೊ ತಪ್ಪಿದೆ; ಒಡೆದೆ !
ಬಿಸುಡದನು, ಓ ಶಿಲ್ಪಿ ; ಮತ್ತೊಮ್ಮೆ ಯತ್ನಗೈ ; ಅದುವೆ ದಾರಿ !

ತಪ್ಪಿದರೆ ಏನೊರ್ಮೆ?
ಅನುಭವಕೆ ಅದೆ ಪೆರ್ಮೆ !
ತಪ್ಪಿದರೆ ತಪ್ಪಿಲ್ಲ ; ತಪ್ಪಿನೊಳಳುಕಿ ನಿಲ್ಲಲದುವೆ ಪಾಪ !
ಬೀಳುವುದು ಹರಿವ ಹೊಳೆ ;
ಅದಕಿಹುದೆ ಕೊಳದ ಕೊಳೆ ?
ನೀರು ನಿಲ್ಲದೆ ಹರಿಯೆ ನಿರ್ಮಲದ ಗಂಗೆ : ನಿಲೆ ಮಲದ ಕೂಪ !

ಕಡಲ ಕಡೆಯಲು ಬೆದರೆ
ನಿನಗೆ ಮರಣವೆ ಮದಿರೆ !
ಕಡಲ ಕಡೆ, ಸುಧೆಯ ಕುಡಿ ; ಹರಿಹರರ ವಿಸಾರಿ ಚಿರಜೀವಿಯಾಗು !
“ನಂಜುದಿಸಲೇನು ಗತಿ ?”
ಅಂಜುವರೆ ಹ್ರಸ್ವಮತಿ ?
ಅವನಿರುವುದದೆ ಕೆಲಸಕಾಗಿ ; ನಂಜುಂಡನನು ಕರೆದು ಕೂಗು !

ಮುನ್ನೇಕೆ ಬಂದೆಯೋ ?
ಇನ್ನಾವ ಮುಂದೆಯೋ ?
ಆ ಮೂಲಚೂಲದಲಿ ಕಾಲಹರಣವ ಮಾಡಲಿಹುದೆ ಹೊತ್ತು ?
ಯಾತ್ರೆಗೈತಂದಿರುವೆ ;
ಹೊರೆ ಹೊತ್ತು ನೊಂದಿರುವೆ ;
ನೋಡಿದರೆ ಹಾದಿಯನು ಗುರಿ ದೂರವೆಂಬುದೂ ನಿನಗೆ ಗೊತ್ತು.

ಇಂತಿರಲು ವಾದದಲಿ,
ತಾರ್ಕಿಕರ ವೋದದಲಿ,
ನನ್ನಿಯನು ಮುಟ್ಟಿನೋಡದೆ ಮಾತಿನೊಳೆ ಕಟ್ಟುವವರ ಕೂಡೆ
ಹೊತ್ತು ಕಳೆಯುವುದೇಕೆ ?
ಸಾಧಕನೆ, ಬಲು ಜೋಕೆ !
ಮಾಯೆಗಿಮ್ಮಡಿಮಾಯೆ ವಾದವೆಂಬುವ ಮಾಯೆ, ತಿಳಿದುನೋಡೆ !

ಬರಿಯ ನಂಬುಗೆ ಬೇಡ,
ಬರಿಯ ಸಂಶಯ ಬೇಡ,
ಹಿಂದನೂ ತೊರೆಯದೆಯೆ, ಇಂದನೂ ಮರೆಯದೆಯೆ
ತೆರಳು ಮುಂದೆ.
"ಅವರಿವರ ಮತವಿರಲಿ,
ನನ್ನ ಪಥ ನನಗಿರಲಿ."
ಎಂದದನು ಕಂಡುಕೊಳ್ವನೆ ಜಾಣನುಳಿದವರು ಕುರಿಯ ಮಂದೆ!

ಕಣ್ ಮುಚ್ಚಿ ನಡೆಯದಿರು;
ಹೃದಯವನು ಕಡಿಯದಿರು;
ಕಾಶಿಯಲಿ ನೀನರಿವೆ ಯಾತ್ರೆಯೇ ತೀರ್ಥಕಿಂ ಶ್ರೇಷ್ಠವೆಂದು.
ಯಾತ್ರೆಗಾಗಿಯೆ ಕ್ಷೇತ್ರ,
ಇದು ಸತ್ಯತಮ ಸೂತ್ರ.
ಸಾಧಕಗೆ ತಿಳಿಯುವುದು ತುದಿಯಲ್ಲಿ ಸಾಧನೆಯೆ ಸಿದ್ಧಿ ಎಂದು!

ಅದರಿಂದೆ ದಾರಿಯೆಡೆ
ಚೆಲುವಿರಲು ನೋಡಿ ನಡೆ;
ಗಾನವಿರೆ ಆಲೈಸು, ಕಲೆಯಿರಲು ಓಲೈಸು ಸಡ್ಡೆಯಿಂದೆ.
ಮೂಡೆ ನೇಸರು ನೋಡು,
ನಾಡ ಬಣ್ಣಿಸಿ ಹಾಡು,
ಹಾಡಿ ಮುದವನು ಹೀರಿ, ಜನಕೆ ಹರುಷವ ಬೀರಿ ತೇಲು ಮುಂದೆ.

ಹಾಡು ಗೆಳೆಯನೆ, ಹಾಡು.
ಹಾಡಿನಿಂದಲೆ ನಾಡು
ಕಣ್ದೆರೆದು ನೆಚ್ಚುದಿಸಿ ಕೆಚ್ಚಿನಿಂ ನಿನ್ನ ಹಿಂಬಾಲಿಪಂತೆ!
ಹಾಡೆ ಬಾಳಿಗೆ ಭಕ್ತಿ,
ಹಾಡೆ ಜೀವಕೆ ಶಕ್ತಿ;
ಹಾಡು, ಜನ್ಮದ ಭಾರವಳಿದು ಕರ್ಮದ ಹೊರೆಯು ಕರಗುವಂತೆ!

ದಾರಿಯಲಿ ಕೊಳದ ಬಳಿ
ತೆರೆಗಳಲಿ ಮಿಂದು ನಲಿ;
ತಿಳಿನೀರನೀಂಟಿ ತಂಗಾಳಿಯಲಿ ಮೈಯೊಡ್ಡಿ ಕಳೆ ದಣಿವನು.
ಹೊಂದಾವರೆಯ ಕೊಯ್ದು
ಚಂದದಿಂದಲಿ ನೆಯ್ದು
ನಿನ್ನೊಲ್ಮೆಗಣ್ಗದನು ಮುಡಿಸಿ ಮುದ್ದಿಸಿ ನಲಿಸಿ ಪಡೆ ತಣಿವನು.

ಹಾದಿಯಲಿ ಹಳ್ಳವಿದೆ,
ಮುಳ್ಳಿಡಿದ ಕೊಳ್ಳವಿದೆ,
ಎಂದಳುಕಿ ಹಿಂದೆಗೆಯದಿರು; ಮುಂದೆ ತೋರುವುದು
ಹೂದೋಟವು!
ಯಾತ್ರಿಕರು ನಿನ್ನಂತೆ
ಹೋದಹರಿಹರು ಮುಂತೆ;
ಹುಡುಕವರ ಹಜ್ಜೆಯನು; ಕಾಣುವುದು ನೆಚ್ಚಿನಾ ಸವಿನೋಟವು!

ಕತ್ತಲೆಯು ಕವಿದು ಬರೆ
ಬಿತ್ತರಿಸಿ ಕಣ್ಣುತೆರೆ;
ರಂಜಿಪುದು ಮುಂದೆ ತೆರಳಿದ ಮಲ್ಲರಾಂತಿರುವ ದಿವ್ಯಜ್ಯೋತಿ ?
ಮೇಣವರ ಕೂಗಿ ಕರೆ :
ಕೇಳಿಸಲು ನಿನ್ನ ಮೊರೆ
ನಿಲ್ಲುವರು ; ಹಿಂದಿರುವ ಸೋದರರ ಕರೆದೊಯ್ಯುವುದವರ ನೀತಿ !

ನೆಚ್ಚಿರಲಿ ! ಕೆಚ್ಚಿರಲಿ !
ಮುಂಬರಿವ ಹುಚ್ಚಿರಲಿ !
ಮುಂದುವರಿವುದೆ ಬಾಳು ; ಹಿಂದೆ ಸರಿವುದೆ ಸಾವು ; ಆತ್ಮಹತ್ಯ !
ಹೋರುವುದೆ ಚೈತನ್ಯ,
ಸುಮ್ಮನಿರೆ ಜಡಶೂನ್ಯ !
ತುದಿಯ ಗುರಿ ಶಾಂತಿ ಎನೆ ಬರಿನಿದ್ದೆಯಲ್ಲವದು ಸತ್ಯ ಸತ್ಯ !

ಎದೆಯ ಕೊರೆಯುವ ಕೀಟ
ಸಂದೇಹದೊಡನಾಟ ;
ಸಕ್ಕರೆಯು ಸಿಹಿಯೊ ಕಹಿಯೋ ತಿಂದು ನೋಡದೆಯೆ
ತಿಳಿವುದೆಂತು ?
ಹಿರಿಯರನುಭವ ಸಿಹಿಯೆ !
ನಿನಗೊಬ್ಬನಿಗೆ ಕಹಿಯೆ ?
ಒಲಿಯದುಳಿವುದಕಿಂತಲೂ ಒಲಿದಳಿವುದೆ ಮೇಲಲ್ತೆ, ಜಂತೂ?

"ಮುಂದೆ ಬರಿ ಸೊನ್ನೆಯಿರೆ ?"
ಮರುಳೆ, ಹಾಗೆನ್ನುವರೆ ?
ಹಿಂದೆ ಬರಿಸೊನ್ನೆ, ಮುಂದೆಯು ಸೊನ್ನೆ, ನೀಂ ಮಾತ್ರ
ಸೊನ್ನೆಯಲ್ಲ ?
ಹೇಡಿಗಳ ವಾದವಿದು,
ಕುಮತಿಗಳ ಬೋಧವಿದು !
ಸೊನ್ನೆಯಿದ್ದರು ಇರಲಿ ! ನುಗ್ಗಿ ಮುಂದಕೆ ನೋಡು
ನೀನು ಮಲ್ಲ !

"ಮುಂದೆ ತಾನಹೆ ಸೊನ್ನೆ"
ಎಂಬನಿಂದೂ ಸೊನ್ನೆ !
ಯಾವ ಸಂಖ್ಯೆಯನೇನು ಸೊನ್ನೆಯಿಂ ಗುಣಿಸಿದರೆ ಲಭ್ಯ ಸೊನ್ನೆ :
ಹಿಂದಿಲ್ಲದಾವಿಂದು ?
ಇಂದಿಲ್ಲದೇಂ ಮುಂದು ?
ಇಂದೆಂಬುದೆಂತಿರುವುದಿಲ್ಲವಾದರೆ ದಿಟದಿ ನಾಳೆ ನಿನ್ನೆ ?

ಗುರಿಗೆಂದೆ ಮುಂಗಂಡು
ಹುಡುಗನೊದೆದಾ ಚೆಂಡು
ಹರಿದಾಡಲಾಡುಂಬೊಲದೊಳದಕೆ ಗುರಿಯಿಲ್ಲವೆಂಬೆಯೇನು ?
ಇರುವಂತೆ ಬಿದಿಯ ಬಗೆ
ತಿರುತಿರುಗಿ ತಿರೆಯೊಳಗೆ
ಇಂದೊ ನಾಳೆಯೊ ಎಂದೊ ಒಂದು ದಿನ ಗುರಿಮುಟ್ಟಿ ಗೆಲುವೆ ನೀನು.

ಕರ್ಮ ನಿನ್ನನು ಕಟ್ಟಿ
ಕೆಡಹಲದನೇ ಮೆಟ್ಟಿ
ಮುಂದೆ ಮೆಟ್ಟಲನೇರು ! ಮರಳಿ ಯತ್ನವ ಮಾಡು ಸತ್ತು ಹುಟ್ಟಿ !
ಹಚ್ಚು, ಬೆಂಕಿಯ ಹಚ್ಚು !
ಸುಡಲೆಲ್ಲವನು ಕಿಚ್ಚು !
ಹುಲ್ಲು ಸುಟ್ಟರೆ ಸುಡಲಿ ! ಲೇಸಾಯ್ತು ಟೊಳ್ಳಳಿಯುತುಳಿಯೆ ಗಟ್ಟಿ !

ಬಾಳು ಸಂದೊಡಮೇನು ?
ಸಾವು ಬಂದೊಡಮೇನು ?
ಸಾವು ಬಾಳಿನ ಕುಂದನೊಂದರಿಯದಿಹ ಶಾಶ್ವತಾತ್ಮ ನೀನು !
ರವಿ ಮುಳುಗಲೇನಂತೆ ?
ಇರುಳಳಿದರೇನಂತೆ ?
ಬಂದಿರುಳಿನುದರದಲಿ ಮಲಗಿಹುದು ಮುಂದೆ ಬಹ ಹಗಲು ತಾನು !

ಹಗಲು ಹೊಣೆ ಹತ್ತಿರಕೆ ;
ಹೊಣೆಯಿರುಳು ಬಿತ್ತರಕೆ ;
ಹಗಲೆಮಗೆ ತೋರದಿಹ ಹಿರಿಯ ವಿಶ್ವವನಿರುಳು ತೋರುತಿಹುದು !
ಬಾಳು ಮುಚ್ಚುವ ಮಣ್ಣು ;
ಸಾವು ಬಿಚ್ಚುವ ಕಣ್ಣು ;
ಇಲ್ಲಿ ಕಂಡರಿಯದಿಹ ಮಹಿಮೆಯನು ನಾವಲ್ಲಿ ಕಾಣಲಹುದು !

ಸೂರ್ಯ ಚಂದ್ರರ ಗತಿಗೆ
ಕಣ್ಣಹ ಜಗನ್ಮತಿಗೆ
ನಿನ್ನ ಗತಿ, ನಿನ್ನ ಮತಿ, ನಿನ್ನ ಸಾಹಸಕೆ ಕಣ್ಣಾಗಲರಿದೇ?
ಭಯವ ಬಿಡು ; ನಲವಿಂದೆ
ಹಾಡುತ್ತೆ ನಡೆ ಮುಂದೆ.
ಸಂದೆಯದ ಪುಸಿತೊಟ್ಟಿಲನು ಕಟ್ಟಿ, ಮಲಗಿ ಜೋಲದಿರು ಬರಿದೆ!

ಬೈಗುಗೆಂಪುರಿಯಲ್ಲಿ
ಸುಡಲಿ ಸಂಶಯವಲ್ಲಿ!
ಹುಣ್ಣಿಮೆಯ ರಾತ್ರಿಯಲಿ ಹೊರಗೆ ಬಾ ನೋಡು! ಸಂದೆಯದ
ಮುಚ್ಚು
ಎಲ್ಲಾದರಿಹುದೇನು?
ಎಳ್ಳಾದರಿಹುದೇನು?
ಜಗದ ನಗೆವೊನಲಿನಲಿ ಕೊಚ್ಚಿಹೋಗುವುದು ಸಂದೆಗದ ಹುಚ್ಚು!

ಏಳು, ಮೆಲ್ಲನೆ, ಏಳು!
ಮನವ ಮುದದಲಿ ತೇಲು!
ಕೋಗಿಲೆಗಳುಲಿಯುತಿವೆ ಪಲ್ಲವಿತ ಚೈತ್ರಕಾನನದಿ ಕೇಳು:
ಸಾಹಸವೆ ಸವಿ ಬಾಳು!
ಸಂದೆಯವೆ ಕಹಿ ಕೂಳು!
ನಂಬುಗೆಯ ಸುಗ್ಗಿಯನು ನೆಟ್ಟು ಸಂದೆಯದ ಮಾಗಿಯನು ಕೀಳು!

ನೋಡು ಎಂತಿದೆ ಸುಸಿಲು !
ಹಸುರ ಮೇಲೆಳಬಿಸಿಲು
ಮಲಗಿಹುದು ಲೀಲೆಯಲಿ ಮೈಮರೆತ ಮೋಹನದ ಶಿಶುವಿನಂತೆ !
ಅಲ್ಲಿ ಬನಬನದಲ್ಲಿ,
ಮಾನವರ ಮನದಲ್ಲಿ
ನೆಚ್ಚುದಿಸಿ ಚಿಮ್ಮುತಿದೆ! ಕರ್ಮಮಯ ಚೇತನಕೆ ಹೊರತು ಚಿಂತೆ !

ನಂಬು ಗುರಿಯಿಹುದೆಂದು !
ನಂಬು ಗುರುವಿಹನೆಂದು !
ನಂಬು ದಾರಿಯಲಿ ಕೃಪೆ ಕೈಹಿಡಿದು ಹಿಂದೆ ಪಾಲಿಸುವುದೆಂದು !
ಗುರುಭಕ್ತ ನಾನೆಂದು,
ಗುರುಶಕ್ತಿ ನನಗೆಂದು
ನಂಬು ! ನಿನ್ನನೆ ನಂಬು ! ಮಂತ್ರದೀಕ್ಷಿತಗೆ ಗುರಿತಪ್ಪದೆಂದೂ !

೨೬-೮-೧೯೩೧

ಕಾಳರಾತ್ರಿ

ಬಿರುಗಾಳಿ ಬೀಸುತಿದೆ, ಬಿರುಮಳೆಯು ಕರೆಯುತಿದೆ;
ಮೇಲೆ ಮೇಲ್ವಾಯ್ದು ಮುಂಗಾರ್ಮುಗಿಲು ಮುತ್ತುತಿದೆ;
ಕಣ್ಗಳಿಗೆ ಮೆತ್ತಿ ಕಗ್ಗತ್ತಲೆಯನು; ಸಿಡಿಲೆರಗಿ
ಮಿಂಚೆಸೆದು ಲೋಕ ಕಂಪಿಸುತಿದೆ; ಹೊನಲೇರಿ
ಹೊಳೆಯುಕ್ಕಿ ಮನುಜರನು ಕೊಚ್ಚುತಿದೆ. ಬೆಚ್ಚುತಿದೆ
ನರನೆದೆ ನೆಚ್ಚುಗೆಟ್ಟು. ಎಲ್ಲೆಡೆಯು ಕೇಳುತಿದೆ
ಹಾಕಾರವು. ಕ್ರಾಂತಿ ಎಂಬುವ ಭೂತು ತಲೆಗೆದರಿ
ಹುಚ್ಚೆದ್ದು ಸುತ್ತುತಿದೆ ಭೀಮಛಾಯೆಯ ಚೆಲ್ಲಿ.
ಓ ಎಲ್ಲಿ? ಶಾಂತಿ ಸೂರ್ಯನು ಎಲ್ಲಿ? ಮುಳುಗಿದನೆ?
ಮುಂದೆಂದು ಮೂಡದಿಹನೆ? ಕೊನೆಗಾಣದಿರುವುದೇ
ಈ ಕಾಳರಾತ್ರಿ? ನರಹೃದಯದಲಿ ತುಂಬಿರುವ
ಪಂಕದಿಂದಲೆ ಮರಳಿ ಕಮಲಗಳು ಕಾಣಿಸವೆ?
ಮನವೇ, ನಿರಾಶೆಯಲಿ ಕೊರಗದಿರು! ಸಾಗರದ
ಮಥನದಲಿ ವಿಷವು ಜನಿಸಿದೆ ಇಂದು! ಮೂಡುವುದು
ಮುಂದೆ ಸೊದೆ! ಹಗಲು ಬರುವುದು ತೊಲಗಿ ಕಾಳರಾತ್ರಿ!

೧೧-೧೧-೧೯೩೧

ಮುಕ್ತಿರಾಹು

ಧುಮುಕಿದೆ !–ಘನತಿಮಿರದ ಪಾತಾಳದ
ಗರ್ಭಕೆ ಧುಮುಕಿದೆ !—ಅನಂತ ಕಾಲದ
ಸುಪ್ತಿಯ ಜಠರಕೆ ಧುಮುಕಿದೆ !— ಧುಮುಕಿದೆ
ಪ್ರಜ್ವಲಿಸುವ ಮಹದುಲ್ಕೆಯ ತೆರದಲಿ
ಜ್ವಾಲಾಮಯ ಲಾಂಗೂಲದ ಭರದಲಿ
ಮೃತ್ಯುಕಾತರ ವೇಗದಲಿ !
ಮಧುರ ಮೋಹನ ಮಾಯೆ ಮುಂಗಡೆ
ಮಳೆಬಿಲ್ಲಿನ ಬಣ್ಣದ ಹಾಸದಲಿ
ಕಟ್ಟೆ ಚುಂಬಿಸಿ ಸೆಳೆದಿತ್ತು !
ಮುಕ್ತಿರಾಹುವ ಛಾಯೆ ಹಿಂಗಡೆ
ಬರಸಿಡಿಲಿನ ಭೀಷಣ ರೋಷದಲಿ
ಅಟ್ಟೆ ತುಡುಕಲು ಬೆಳೆದಿತ್ತು !
ನುಗ್ಗಿ ತಲೊದರಿದೆ "ಬೇಡ ! ಒಲ್ಲೆ !
ಬಿಡುಗಡೆ ಸಾಕು ! ಸೆರೆ ಹೊರೆ ಬೇಕು !
ಕೈಮುಗಿದೆನು ಬಿಡು, ಓ ಮುಕ್ತಿ !"
ಹಿಂಗಡೆ ಗದರಿತು "ಬಲ್ಲೆ ! ಬಲ್ಲೆ !
ನಾ ಬಿಡೆನೆಂದೂ ! ನುಂಗಲೆ ಬೇಕು !
ಯುಗ ಯುಗ ಬಿಡದೋ ಯಮಶಕ್ತಿ !"
ಹಿಂದಕೆ ತಿರುಗದೆ ನೋಡದೆ ಓಡಿದೆ ;
ಧಾವಿಸುವುದನೇ ಸಾಧನೆ ಮಾಡಿದೆ.
ಮಧುರ ಮೋಹನ ಮಾಯೆ ಮುಂಗಡೆ;
ಮುಕ್ತಿರಾಹುವ ಛಾಯೆ ಹಿಂಗಡೆ ;
ನಡು ನುಗ್ಗಿದೆನಾವೇಗದಲಿ,

ಮೃತ್ಯುಕಾತರ ವೇಗದಲಿ!
ಇಂತು
ಶತಶತಮಾನಗಳಿಂತು—
ಧುಮುಕಿದೆ!—ಘನತಿಮಿರದ ಪಾತಾಳದ
ಗರ್ಭಕೆ ಧುಮುಕಿದೆ!—ಅನಂತ ಕಾಲದ
ಸುಪ್ತಿಯ ಜಠರಕೆ ಧುಮುಕಿದೆ! ಧುಮುಕಿದೆ
ಪ್ರಜ್ವಲಿಸುವ ಮಹದುಲ್ಕೆಯ ತೆರದಲಿ,
ಜ್ವಾಲಾಮಯ ಲಾಂಗೂಲದ ಭರದಲಿ
ಮೃತ್ಯುಕಾತರ ವೇಗದಲಿ!
ವೇಗ ವೇಗದಲಿ!

ಎನಿತು ಓಡಿದರೇನು ತಡೆವುದೆ?
ಎನಿತು ಬೇಡಿದರೇನು ಬಿಡುವುದೆ?
ಮುಕ್ತಿರಾಹುವು ನಿಷ್ಕರುಣೆ!
ಕರಾಳ ಬಲದಲಿ, ಕಠೋರ ಛಲದಲಿ,
ಕಲ್ಪಾಂತರಗಳು ಹೊರಳಿರೆ ಕೆಲದಲಿ,
ಬೆಂಬತ್ತಿತು ಅವಿರಾಮದಲಿ!
ಪ್ರಲಯದ ಕಾಮದಲಿ!
ಅಯ್ಯೋ! ಎಲ್ಲಿ?
ಆಶ್ರಯವಿನ್ನೆಲ್ಲಿ?
ಅಟ್ಟಿ ಬಂದಿತು, ಬಂದಿತು ಛಾಯೆ,
ಮುಕ್ತಿರಾಹುವಿನನಂತ ಛಾಯೆ!
ತಪ್ಪಿಸಿಕೊಳ್ಳಲು ಜೀವವು ಮುದುಗಿತು;
ಕಟ್ಟಕಡೆಯಲಿ, ಕಡೆಯುಸಿರ್ ಹುದುಗಿತು—
ಜಡತೆಯ ಚಿರನಿದ್ರೆಯೊಳದ್ದಿ?

ಇಲ್ಲ !
ಇಲ್ಲಿಯು ಸುಖವಿಲ್ಲ !—
ಕ್ಷಣ ಕ್ಷಣದಲಿ ಕಣಕಣವನೆ ಹಿಡಿದು
ಕಿತ್ತೆಳೆಯಿತು ಜಡಮೃತ್ತನೆ ಕಡೆದು :
ಮುಕ್ತಿರಾಹುವು ಚೇತನಕಾಮಿ,
ಸುದೂರ ವಿಶ್ವದ ಚಿರನವಗಾಮಿ.
ಕರುಣೆಯೆ ಇಲ್ಲವೆ ರಾಹುವೆ ನಿನಗೆ ?
ಎನಿತುಂಡರು ಹೊಡೆ ತುಂಬದೆ ನಿನಗೆ ?
ಬಿಡು ; ಬಿಡು ನನ್ನನು ನಿದ್ರೆಯ ಸುಖಕೆ;
ಸರ್ಪಚುಂಬನ ಕೊಡದಿರು ಮುಖಕೆ.—
ಮುಕ್ತಿರಾಹುಪ್ರೇಮಜ್ವಾಲೆ
ವ್ಯಷ್ಟಿಯ ಸೃಷ್ಟಿಗೆ ಬೇಳುವ ಲೀಲೆ !—
ಪೀಡಿಸೆ, ಕೋಟಲೆಗಾರದೆ ಮಣ್ಣು
ತುತ್ತತುದಿಯಲಿ ತೆರೆಯಿತು ಕಣ್ಣು !
ಮೃಣ್ಮಯ ನಿದ್ರೆಯ ಇಂಬನು ಬಿಟ್ಟು
ಸಸ್ಯಸ್ವಪ್ನಕೆ ಬಾಳನು ಕೊಟ್ಟು
    ಹೂವೆಲೆಗಳ ಸೌಂದರ್ಯದಲಿ
    ಮೈಮರೆತೆನು ಮಾಧುರ್ಯದಲಿ :
ವಸಂತ ಋತುಗಳ ಕನಸನು ಕಂಡೆ ;
ಸೂರ್ಯೋದಯಗಳ ಮಧುವನು ಉಂಡೆ ;
    ಮದಿಸಿದ ತುಂಬಿಯ ಗಾನದಲಿ
    ಕಿವಿ ತುಂಬಿತು ಸ್ವರಪಾನದಲಿ :
ದಿನ ಬೆಳಗಾದರೆ ಹಸುರಿನ ಮೇಲೆ
ಮಿಸುನಿಯ ರನ್ನದ ಹಿಮಮಣಿ ಲೀಲೆ ;
ಕೊಂಬೆಯ ತೂಗುಯ್ಯಾಲೆಯಲಿ ಹಕ್ಕಿ
ಸುರಗಾನದ ಹೊಳೆ ಹರಿಸಿತು ಸೊಕ್ಕಿ ;

ಮಲಯಾದ್ರಿಯ ಮಂದಾನಿಲ ಬಂದು
ನವೀನ ಆಶಾಪಾಶವ ತಂದು
ಬಿಗಿದನು ತನುಮನಗಳನೆಲ್ಲ !
ಆಹಾ ! ಬಂಧನವದು ಬೆಲ್ಲ !—
ಹೂವಿನ ತುಟಿಯಲಿ ತುಂಬಿಯ ಕೆನ್ನೆಗೆ
ಮುತ್ತಿಡುತಿರೆ, ಚೆಲುವಿನ ಬನಕನ್ನೆಗೆ
ಬಣ್ಣ ಬಣ್ಣದ ಸಿಂಗರ ಮಾಡಿ
ಆಮೋದಿಸುತಿರೆ,—ಹಿಂದಕೆ ನೋಡಿ !—
ಅಯ್ಯೋ, ಮುಕ್ತಿಯ ರಾಹುವು ಮತ್ತೆ !
ಅಯ್ಯೋ, ಅಮೃತದ ವಿಷದಿಂ ಸತ್ತೆ !

ಓಡಲು ಎಳಸಿದೆ, ಎಳಸಿದೆ, ಎಳಸಿದೆ ;
ಆಸೆಯ ಬಲದೊಳೆ ರೆಕ್ಕೆಯ ಬೆಳೆಸಿದೆ !
ವಿಹಂಗವಾಗುತೆ ಮುಂದಕೆ ಹಾರಿದೆ,
ದೇಶದೇಶಗಳ ಮೂಲೆಯ ಸೇರಿದೆ ;
ಹಣ್ಣನು ತಿಂದು, ಕೊಳದಲಿ ಮಿಂದು,
ಹಾಡಿನ ಮದಿರೆಗೆ ಮನವನು ಮಾರಿದೆ.
—ಮರೆಯಾಯಿತು ಮುಕ್ತಿಯ ರಾಹು !
ಸ್ಥಾವರ ಹೋಗಿ ಜಂಗಮವಾಗಿ
ನಲಿದುಲಿದಾಡಿತು ಪ್ರಾಣದ ಭೋಗಿ.—
ಒಮ್ಮೆ ಪ್ರಭಾತದ ತರು ಶಿಖರದಲಿ
ಸ್ವರ್ಣೋಜ್ವಲ ಸೂರ್ಯನ ಶಿಶುಕರದಲಿ
ಸಂಗೀತದ ಸಾಗರದಲಿ ತೇಲಿ
ಇರಲೈತಂದುದು ಬಾಣವ ಹೋಲಿ
ಅನಿಷ್ಟ ಮುಕ್ತಿಯ ಶನಿರಾಹು :

ಮತ್ತೆ ಓಡಿದೆ! ಸಾಹಸ ಮಾಡಿದೆ!
ಆಗಾರೆದೆಯನೊ ಆಶ್ರಯ ಬೇಡಿದೆ!
ನಿಂತೆಡೆಯಲ್ಲಿ ಕುಳಿತೆಡೆಯಲ್ಲಿ
ಎಲ್ಲಿಯು ಸುಖವಿಲ್ಲ;
ಎಲ್ಲಿಯು ಬಿಡಲಿಲ್ಲ.
ಕಡೆಗೆ
ಕಟ್ಟ ಕಡೆಗೆ—
ಮಾನವನೆದೆಯಲಿ ಎಚ್ಚತ್ತೆ!
ಪಾರಾದೆನು ಮತ್ತೆ!

ಮಾನವನೆದೆ! — ಹಾ! ಆ ನಾಮವೆ ಸುಧೆ!
ಇಲ್ಲಾದರು ಗೆದ್ದೆನು ಎಂದೆಳಸಿದೆ:
ಚಿಂತೆಗಳಿವೆ, ಭಾವಗಳಿವೆ, ಕಲೆಯಿದೆ;
ಪ್ರೇಮದ ಮೋಹದ ಪ್ರಣಯದ ಬಲೆಯಿದೆ.
ಮುಕ್ತಿರಾಹುವ ತೊಲಗಿಸಿಕೊಳ್ಳಲು,
ಮುಕ್ತಿ ಚಿಂತೆಯನಾಚೆಗೆ ತಳ್ಳಲು,
ಮತ ಪೂಜೆಗಳಿವೆ, ಮಂತ್ರವಿದೆ:
ಶಾಸ್ತ್ರದ ಕಪಟ ಕುತಂತ್ರವಿದೆ.
ವೇದಾಂತಗಳಿವೆ, ಭಕ್ತಿಯಿದೆ;
ವಾದಜಾಲವಿದೆ, ಯುಕ್ತಿಯಿದೆ!
ಮಾನವನೆದೆ! — ಹಾ! ಆ ನಾಮವೆ ಸುಧೆ!
ಇಲ್ಲಾದರು ಗೆದ್ದೆನು ಎಂದೆಳಸಿದೆ!
ಶಿಶು ಲೀಲೆಗೆ ಕೈಹಾಕಿದೆ ಮೊದಲು:
ಮುಗ್ಧತೆಯನು ಹೊರಸೂಸುವ ತೊದಲು,
ಮೊಲೆವಾಲನು ಕುಡಿಕುಡಿಯುವ ಹಿಗ್ಗು,
ಅಲ್ಲದ ಸಲ್ಲದ ಬಯಕೆಯ ಸಿಗ್ಗು,

ನವನವ ಪರಿಚಯಗಳ ಸಂತೋಷ,
ಹೊಸಬಾಳಿನ ಹೊಸಹೊಸ ಆವೇಶ.
ನಾನಿಂತಿರುತಿರೆ, ಬಾಲ್ಯದ ಬಾಹು
ಮೆಲ್ಲಗೆ ತಬ್ಬಿತು ; ಮುಕ್ತಿಯ ರಾಹು
ಕಾಲವ ಕೆಣಕುತ ತಳ್ಳಿತು ಮುಂದೆ.
ಅರಿಯದವೊಲೆ ಬೆಂಬತ್ತಿತು ಹಿಂದೆ !—
ಅಡವಿಯ ತೊಡೆಯಲಿ, ತೃಣಶಯ್ಯೆಯಲಿ,
ಪುಷ್ಪಿತ ಲತೆಗಳ ತೂಗುಯ್ಯಾಲೆಯಲಿ,
ನದಿಗಿರಿನಿರ್ಝರ ಜಲಕಲತಾನದಿ,
ವಿಹಂಗ ಕೂಜನ ಮಧುಮಯಗಾನದಿ,
ಗೆಳೆಯರ ಕ್ರೀಡೆಯ ಹಾಸವಿಲಾಸದಿ
ಮನ ಮೈಮರೆತಿರೆ, ಯೌವನ ಪಾಶದಿ
ಕಟ್ಟಿತು ನನ್ನನು ಮುಕ್ತಿಯ ರಾಹು.
ಬಾಳಿನ ಬೆನ್ನೊಳೆ ಸಾವಿನ ಬೇಹು !—

ಎದೆಯೊಲುಮೆಯ ಚಿಲುಮೆಯ ಹೆಣ್ಣು !
ಮುಕ್ತಿಯ ಕಣ್ಣಿಗೆ ಹಿಡಿಮಣ್ಣು !
ಪ್ರೇಮದ ಮರೆಯಲಿ, ಬೇಟದ ಸೆರೆಯಲಿ,
ಸೌಂದರ್ಯದ ಹೂದೂಳಿಯ ತೆರೆಯಲಿ,
ಬಿಂಬಾಧರದಾಮೋದದ ಕರೆಯಲಿ
ಮುಕ್ತಿಯ ಕಣ್ಣಿಗೆ ಮಣ್ಣೆಸೆದೆ :
ಮಾಯೆಯ ಎದೆಗೆದೆಯನು ಮಸೆದೆ ;
ಮಂಥನದೊಳೆ ಮೂಡಿತು ಕಾವು ;
ಸುಟ್ಟುರಿಸಿತು ಚೆಲುವಿನ ಸಾವು !
ಒಡನೆಯೆ ತೋರಿತು ಮುಕ್ತಿಯ ರಾಹು,
ತಬ್ಬಿತು ವೈರಾಗ್ಯದ ಯಮಬಾಹು !

ಮುಕ್ತಿರಾಹು

ಮುಕ್ತಿಯು ವಂಚಿಸೆ ಮುಕ್ತಿಯು ಹುಡುಕಿದೆ ;
ತತ್ತ್ವ ವಿಚಾರದ ಗಲಭೆಗೆ ದುಡುಕಿದೆ ;
ಜಪತಪ ಪ್ರಾರ್ಥನೆ ಧ್ಯಾನವ ತುಡುಕಿದೆ ;
ಮುಕ್ತಿಯು ಹಾದಿಗೆ ಎಡರನು ಅಡಕಿದೆ !
ಅಯ್ಯೋ, ತತ್ತ್ವದ ಮೋಸವು ಕೂಡ,
ಅಯ್ಯೋ, ಧರ್ಮದ ವೇಷವು ಕೂಡ
ವಂಚಿಸಲಾರದೆ ಹೋದುವೆ ನಿನ್ನನು ?
ಮುಕ್ತಿರಾಹುವೆ ಬಿಡೆಯಾ ನನ್ನನು ?
ಇದೊ ! ಶರಣಾದೆನು ! ನಾ ಸೋತೆ !
ನುಂಗೆನ್ನನು ! ತಪ್ಪಲಿ ರೋತೆ !

ನಕ್ಷತ್ರಗಳೊಡೆದುರುಳಲಿ ! ವಾರಿಧಿ
ಮೇರೆಯು ತಪ್ಪಲಿ ! ಆಕಾಶದ ನದಿ
ಅಪ್ಪಳಿಸಲಿ, ಭೂವಲಯುವ ಕೊಚ್ಚಲಿ !
ಪ್ರಲಯಕೆ ತ್ರಿಭುವನ ಕಂಪಿಸಿ ಬೆಚ್ಚಲಿ !—
ಧುಮುಕುವೆ !—ಘನತಿಮಿರದ ಪಾತಾಳದ
ಗರ್ಭಕೆ ಧುಮುಕುವೆ ! ಅನಂತ ಕಾಲದ
ಸುಪ್ತಿಯ ಜಠರಕೆ ಧುಮುಕುವೆ !—ಧುಮುಕುವೆ
ಪ್ರಜ್ವಲಿಸುವ ಮಹದುಲ್ಕೆಯ ತೆರದಲಿ,
ಜ್ವಾಲಾಮಯ ಲಾಂಗೂಲದ ಭರದಲಿ,
ಮೃತ್ಯುಕಾತರ ವೇಗದಲಿ !
ಶೂನ್ಯದ ತೃಷೆಯಾವೇಗದಲಿ !

೨೧-೧೦-೧೯೩೨

ಪ್ರೇಮದ ಪ್ರೇತ

ಹೃದಯ ಶ್ಮಶಾನದಲಿ
ವೈರಾಗ್ಯ ರಾತ್ರಿಯಲಿ
"ಮುತ್ತು ಬೇಕೇ ಮುತ್ತು ?
ಕೆಂದುಟಿಯ ಸವಿ ತುತ್ತು !"
ಎಂದು ಪ್ರೇಮದ ಪ್ರೇತ
ಚೀರುತ್ತಿತ್ತು !
ಬಂಡೆಗಳ ಬಾಯ್ದೆರೆದು,
ತರುಗರ್ಭಗಳ ಬಿರಿದು,
ಶೂನ್ಯವನೆ ಕರೆಕರೆದು,
ಎದೆಯ ಸುಡುಗಾಡಿನಲಿ
ತ್ಯಾಗದ ತಮಿಸ್ರದಲಿ
"ಮುತ್ತು ಬೇಕೇ ಮುತ್ತು ?
ಕೆಂದುಟಿಯ ಸವಿ ತುತ್ತು !"
ಎಂದು ಪ್ರೇಮದ ಪ್ರೇತ
ಚೀರುತಿತ್ತು !
ಬೆಸೆಯು ದನಿಯನು ಮಸೆದು
ಬೀರುತಿತ್ತು !

ಅದನು ನಡುಗಿತು ಕೇಳಿ
ಜಗವು ಕಂಪನ ತಾಳಿ,
ರೋದನದ ಹೊನಲಲ್ಲಿ
ಮುಳುಗಿ ತೇಲಿ !

ಪ್ರೇಮದ ಪ್ರೇತ

ಫಲವನುಣ್ಣದ ಒಲ್ಮೆ
ಕೈಗೂಡದಿಹ ನಲ್ಮೆ
ಚೀರುತಿರೆ ಬಾಯಾರಿ
ಪ್ರೀತಿರಸವನು ಕೋರಿ,
ಜೀವನವೆ ಕಂಪಿಸಿತು
ಮರುಕ ತೋರಿ!
ವೈಕುಂಠ, ಕೈಲಾಸ,
ನರಕ, ಇಂದ್ರನಿವಾಸ
ಎಲ್ಲ ಮೊಗಬಾಡಿದುವು;
ಎಲ್ಲ ಅಲುಗಾಡಿದುವು
ಬೆಚ್ಚಿಬಿದ್ದು!
ಪ್ರೇಮ ಪ್ರೇತದ ವಾಣಿ
ಪ್ರಲಯದುಲ್ಕೆಯ ವೇಣಿ;
ಸೃಷ್ಟಿಶಕ್ತಿಯ ಎದೆಯ
ಹಿರಿಯ ಬಯಕೆ
ಸಲ್ಲದಿರೆ, ಅದು ಚಿಹ್ನೆ
ಭುವನಲಯಕೆ!

ಪ್ರೇಮ ಪ್ರೇತದ ಸೊಲ್ಲ
ಕೇಳಿ ಬೆಚ್ಚುತ ಎಲ್ಲ
ಮೂಕವಾಯ್ತು!
ಮುಂದೆ ಗತಿ ಏನೆಂದು
ಶೋಕವಾಯ್ತು!

ಮಸಣದಾ ಮೂಲೆಯಲಿ
ವೈರಾಗ್ಯನಿಧಿ ಶಿವನ

ರುದ್ರ ಮೂರ್ತಿಯ ತಪಕೆ
ಭಂಗವಾಯ್ತು !
ವೈರಾಗ್ಯದಾ ಮಂಜು
ಗಡ್ಡೆಗಟ್ಟಿದ ನಂಜು
ಕರಗಿ ಹೋಯ್ತು !—
ಮಾಂಸ ಕರಗಿದ ದೇಹ,
ಅಸ್ಥಿಗೇಹ !
ಹೊಸೆದ ಜಡೆಜಡೆ ತಲೆಯು
ಕೊಳಕು ಬಲೆಯು !
ಕಣ್ಣು ಬತ್ತಿದ ಕೆನ್ನೆ
ಬರಿಯ ಸೊನ್ನೆ !
ವೈರಾಗ್ಯಕಿದೆ ಕೀರ್ತಿ,
ಪ್ರೇತ ಮೂರ್ತಿ ?—
ಇಂತು ಧ್ಯಾನದಿ ಮಗ್ನ,
ಇಂತು ಶೂನ್ಯದಿ ಲಗ್ನ
ಆ ಶ್ಮಶಾನದ ನಗ್ನ
ತಪೋಮೂರ್ತಿ !
ಪ್ರೇಮ ಪ್ರೇತದ ಸೊಲ್ಲು
ಚುಚ್ಚುತಿತ್ತು !
ತ್ಯಾಗ ಮೂರ್ತಿಯು, ಕಲ್ಲು
ಬೆಚ್ಚಿಬಿತ್ತು !
ಅಶರೀರ ಚುಂಬನವು
“ಬೇಕು ಅವಲಂಬನವು !”
ಎಂದು ಕೂಗಿರೆ ಶಿವನು
ಕಂಪಿಸಿದನು !

ಒಡನೆ ಮದನನು ಒಲವ
  ಸಿಂಪಿಸಿದನು !
ಹೃದಯ ಮರುಭೂಮಿಯಲಿ,
ವೈರಾಗ್ಯ ಸ್ವಾಮಿಯಲಿ,
ಪ್ರಚ್ಛನ್ನ ಕಾಮಿಯಲಿ
ವಿಶ್ವದಾಸೆಗಳೆಲ್ಲ
  ಮೂಡಿದತ್ತು !
ಪ್ರೇಮ ಪ್ರೇತದ ಮುತ್ತು
  ತುಟಿಗೆ ಬಿತ್ತು !
ತ್ಯಾಗ ಪ್ರೇತದ ಮುಂದು
ಪ್ರೇಮ ಪ್ರೇತವು ನಿಂದು
  ತಬ್ಬಿದತ್ತು !

ಎರಡು ಎಲುಬಿನ ಗೂಡು
ಒಂದಾದೊಡನೆ ನೋಡು :
ಹಿಂದಿನಾ ಸುಡುಗಾಡು
  ಬೃಂದೆಯಾಯ್ತು !
ಮೋಹ ತ್ಯಾಗದೊಳಾಗಿ,
ನನ್ನಿ ಸೊಬಗಿನೊಳಾಗಿ
  ಒಂದೆಯಾಯ್ತು !
ಆ ಇರುಳು ಹಗಲಾಯ್ತು,
ಆ ಮಸಣ ಬನವಾಯ್ತು,
ಆ ದುಃಖ ಸುಖವಾಯ್ತು ;
ಮಾಘಮಾಸವೆ ಹೋಗಿ
  ಚೈತ್ರವಾಯ್ತು !

ಕೃಷ್ಣ ರಾಧೆಯರಾಗಿ
ನೃತ್ಯವಾಯ್ತು !
ಪ್ರೇಮ ಪ್ರೇತದ ಬಯಕೆ
ಸಫಲವಾಯ್ತು ;
ತ್ಯಾಗ ಭೂತದ ತಪಕೆ
ಸಿದ್ಧಿಯಾಯ್ತು !

ಪ್ರೇಮ ಪ್ರೇತದ ಮುತ್ತು
ತ್ಯಾಗದಧರಕೆ ತುತ್ತು :
ಆದೊಡನೆ ಮೂಡಿತ್ತು
ಮನ್ಮಥ ರತಿ !
ಎರಡು ಎಲುಬಿನ ಗೂಡು
ಒಂದಾದೊಡನೆ ನೋಡು :
ರೂಪರಾಶಿಯು ಜೋಡು
ಶಿವಪಾರ್ವತಿ !

೧೧-೩-೧೯೩೩

ಕಲ್ಕಿ

ನಿದ್ದೆಯ ಲೋಕದಿ ಕನಸಿನ ಬೀದಿ.
ತಿರುಗಿದೆ, ತೊಳಲಿದೆ, ತಪ್ಪಿತು ಹಾದಿ!
ಮುಂದೆ ಕಾಣಿಸಿತೊಂದು ಅರಣ್ಯ,
ಅನಂತವಾದುದು ವನ ವಿಸ್ತೀರ್ಣ.
ಹೆಮ್ಮರಗಳು ಕಿಕ್ಕಿರಿದುವು ಅಲ್ಲಿ,
ಬಿಡುವಿಲ್ಲದೆ ಹೆಣೆದಿದ್ದುವು ಬಳ್ಳಿ;
ಮುಳ್ಳಿನ ಪೊದೆಗಳು, ಗರಗಸವಳ್ಳಿ,
ಪ್ರೇತದಂತೆ ಪಾಪಾಸಿನ ಕಳ್ಳಿ!
ನುಗ್ಗಿದೆ ನಾನಾ ಹಳುವಿನಲಿ;
ಆ ಕನಸಿನ ಹೆಗ್ಗಾಡಿನಲಿ.
ಅಲ್ಲಿದ್ದುದು ಬೆಳಕೆಂಬುವುದಲ್ಲ.
ಕತ್ತಲು ಅಲ್ಲ!
ಬೆಳಕೋ ಕತ್ತಲೋ ಶಿವನೇ ಬಲ್ಲ!
ಶಿವನೇ ಬಲ್ಲ!
ಪ್ರೇತಗಳಂದದಿ ಭೀತಿಯ ಛಾಯೆ
ಸುಳಿಸುಳಿದಾಡಿತು ಅಲ್ಲಿ,
ಆ ಘೋರ ಕಾನನದಲ್ಲಿ!
ನಡೆದೇ ನಡೆದೇ ನಡೆದೂ ನಡೆದೆ,
ಸಾಹಸ ಬಿಡದೆ, ಎದೆಗೆಡದೆ.
ಸುತ್ತಲು ಮೌನ!
ಶ್ಮಶಾನ ಮೌನ!
ಕಾಡನು ದಾಟಿದೆ: ಮುಂಗಡೆ ಬೆಟ್ಟ;
ಶಿಖರವೊ ನಿಂತಿದೆ ಮುಗಿಲಿನ ಮುಟ್ಟ!

ಹತ್ತೀ ಹತ್ತೀ ಹತ್ತೀ ಹತ್ತಿ
ಕಡೆಯಲಿ ಸಿಕ್ಕಿತು ನಡುನೆತ್ತಿ!
ನೋಡಿದೆನಲ್ಲಿ
ನಡುನೆತ್ತಿಯಲಿ!—
ಯಾವುದೊ ಊರು ಆ ಊರು?
ಬರಿ ಮಾಯದ ಊರು!
ಧನಿಕರ ಮನೆಗಳು ಒಂದೆಡೆ ನಿಂತಿವೆ,
ಬಡವರ ಗುಡಿಸಲು ಒಂದೆಡೆ ನಿಂತಿವೆ.
ಜ್ಯೋತಿಯ ಮಣಿದೀಪಗಳಲ್ಲಿ;
ಕತ್ತಲು, ಕಗ್ಗತ್ತಲು ಇಲ್ಲಿ!
ಹಾಡಿನ ನುಣ್ದನಿಯತ್ತ,
ಗೋಳಿನ ನೀಳ್ದನಿಯಿತ್ತ.
ಕೂಳನು ಹೆಮ್ಮೆಗೆ ಬಿಸುಡುವರಲ್ಲಿ,
ಹೊಟ್ಟೆಗೆ ಇಲ್ಲದೆ ಕೊರಗುವರಿಲ್ಲಿ!
ಆ ಕಡೆ ಉದ್ಯಾನ;
ಈ ಕಡೆ ಶ್ಮಶಾನ!
ಪೀತಾಂಬರಗಳ ಹೊದೆಯುವರಲ್ಲಿ,
ಕೌಪೀನಕೆ ಚಿಂದಿಯು ಸಿಗದಿಲ್ಲಿ!
ನೋಡುತ ನೋಡುತ ನೋಡುತ್ತಿದ್ದೆ;
ನೋಡುತ್ತಿರೆಯಿರೆ ಬೆಚ್ಚಿ ಬಿದ್ದೆ:
ಬಡಬಗ್ಗರ ಜಠರಾಗ್ನಿಯು ಎದ್ದು
ಗುಡಿಸಿಲುಗಳಿಗೇ ಬೆಂಕಿಯು ಬಿದ್ದು
ಧಗಧಗ ಧಗಧಗ ಹೊತ್ತಿದುದು,
ಭುಗಿಭುಗಿಲೆನ್ನುತ ಮುತ್ತಿದುದು!
ಮುಗಿಲಿನ ವರೆಗೂ ಬಾನಿನ ವರೆಗೂ
ದಿಕ್ಕು ದಿಕ್ಕುಗಳ ಜುಟ್ಟಿನ ವರೆಗೂ

ಬಡವರ ಬೆಂಕಿಯು ನಾಲಗೆ ಚಾಚಿ
    ಶ್ರೀಮಂತರನಪ್ಪಿತೂ ಬಾಚಿ !
ಬಡವರ ಸಿಟ್ಟದು ಏನು ಪಿಶಾಚಿ ?
ಬಡಬಾಗ್ನಿಯೆ ತಲೆತಗ್ಗಿತು ನಾಚಿ !
ಶ್ರೀಮಂತರ ಸೌಧಂಗಳ ನೆತ್ತಿ
ಸೀದುದು ಬಡಹೊಟ್ಟೆಯ ಉರಿಹೊತ್ತಿ !
ದೂರದ ಆ ಗಿರಿಶಿಖರದ ಮೇಲೆ
ನನಗೂ ತಟ್ಟಿತು ಬೆಂಕಿಯ ಜ್ವಾಲೆ !
ಕೇಳಿಸಿತೊಡನೆಯೆ ಹಾಹಾಕಾರ !
    ಮಕ್ಕಳುಮರಿಗಳ ಚೀತ್ಕಾರ !
ಗರ್ಭಿಣಿ ಸ್ತ್ರೀಯರು, ಬಾಣಂತಿಯರು,
ನವ ವಧುಗಳು ಮೇಣ್ ಶ್ರೀಮಂತೆಯರು ;
ಹುಡುಗರು, ಮುದುಕರು, ಕುಂಟರು ಕಿವುಡರು :
ಬಡವರ ಗೋಳನು ಕೇಳದ ಕಿವುಡರು :
ಹೊಟ್ಟೆಯ ಪಾಡಿಗೆ ಕಾವಿಯನುಟ್ಟು
ಬಡವರ ಹಸಿವೆಗೆ ಮೌಢ್ಯವ ಕೊಟ್ಟು
    ಸುಖಸಂಪತ್ತನು ಕೊಂಡವರು,
    ಮೃಷ್ಟಾನ್ನವನೇ ಉಂಡವರು ;
ಗುರುಗಳು ಶಿಷ್ಯರು ಮಸೆಗಳು ಮಠಗಳು
ಎಲ್ಲರು ಬೆಂದರು ಬಡಬಾಗ್ನಿಯಲಿ !
ಬಡವರ ಬಗ್ಗರ ಜಠರಾಗ್ನಿಯಲಿ !
ಬಡವನ ಜಠರಾಗ್ನಿಯೆ ಬಡಬಾಗ್ನಿ !
ಬಡವನೆ ಕಲಿಯುಗದಂತ್ಯದ ಕಲ್ಕಿ !

    ನೋಡುತಲಿದ್ದೆ ;
    ನೋಡುತಲಿದ್ದೆ !

ಕಣ್ಮರೆಯಾಯಿತು ಆ ದೃಶ್ಯ !
ಏನಿದು ಈ ದೃಶ್ಯ ?
ರಕ್ತದ ಜಲಪಾತ !
ನರಮಾಂಸದ ನಾತ !
ಧುಮುಧುಮುಕುತಲಿದೆ ರಕ್ತದ ರಣಧುನಿ !
ಹೊರ ಹೊಮ್ಮುತ್ತಿದೆ ನರರಾರ್ತಧ್ವನಿ !
ಗಗನವು ರಕ್ತ ! ಭೂಮಿಯು ರಕ್ತ !
ನೋಡಿದರೆತ್ತಲು ರಕ್ತ ! ರಕ್ತ !
ಅಯ್ಯೋ ರಕ್ತ !
ಧುಮುಕುವ ಶೋಣಿತ ಗಿರಿಝರಿಯಲ್ಲಿ
ನರ ರುಂಡಗಳು
ನರ ಮುಂಡಗಳು
ಮುಂಗಾರ್‍ಗಾಲದ ಬಲ್ಸರಿಯಲ್ಲಿ
ಆಲಿಯ ಕಲ್ಲುಗಳುರುಳುರುಳ್ವಂತೆ
ಧುಮುಕುತಲಿರುವುವು ! ಬಂಡೆಗಳಂತೆ
ಧುಧುಂ ಧುಧುಂ ಧುಧುಮ್ಮನೆ ಬಿದ್ದು
ಹಾರುತಲಿವೆ ಬಿಸಿನೆತ್ತರು, ಸದ್ದು !
ಸುಂದರಿಯರ ತಲೆಮಂಡೆಗಳು,
ಶ್ರೀಮಂತರ ನೆಣದುಂಡೆಗಳು,
ಪಾಪದ ದೇಹ, ಪುಣ್ಯದ ದೇಹ,
ಗುಡಿಗೋಪುರಗಳು, ಧರ್ಮದ ಗೇಹ,
ತೇಲಿ, ತೇಲಿ, ತೇಲಿ, ತೇಲಿ
ನುಗ್ಗುತಲಿವೆ ಕಸಕಡ್ಡಿಯ ಹೋಲಿ !

ಯಾರವನಲ್ಲಿ ? ದೂರದಲಿ,
ಧಾವಿಸಿ ಬರುವನು ಕ್ರೌರ್ಯದಲಿ !

ಅಸ್ಥಿಪಂಜರದಶ್ವವನೇರಿ,
ಬೆಳ್ಳಗೆ ಚಿಲಿಯುವ ದಾಡೆಯ ತೋರಿ,
ಅಸ್ಥಿಪಂಜರದಾಳವನು !
ಪ್ರೇತಸ್ವರೂಪಿ ಅದಾರವನು ?
ಬಲಗಡೆ ಕೈಯಲಿ ಮಿಂಚಿನ ಕತ್ತಿ !
ಎಡಗಡೆ ಕೈಯಲಿ ಸಿಡಿಲಿನ ಬುತ್ತಿ !
ಎಲುಬಿನ ಕುದುರೆ ! ಎಲುಬಿನ ಆಳು !
ಇವನೆಯೆ ಕಲ್ಕಿ ? ಬಡವರ ಬಾಳು ?
ಮೂರ್ತಿವೆತ್ತಿಹ ಬಡವರ ಗೋಳು !
ನೋಡುತಲಿದ್ದೆ,
ಕೇಳುತಲಿದ್ದೆ !
"ಹಸಿವೇ ! ದಾಹಾ !" ಎನ್ನುತ ಬಂದು,
"ರಕ್ತಾ ! ರಕ್ತಾ ! ರಕ್ತಾ !" ಎಂದು
ನೆತ್ತರು ಹೊಳೆಯಲಿ ಧುಮುಕಿದನು,
ಕುದುರೆಯೊಡನೆ ಧುಮ್ಮಿಕ್ಕಿದನು !
ಕುಡಿದನು ರಕ್ತವ ನೊಗೆನೊಗೆದು,
ತಿಂದನು ತಲೆಗಳ ತೆಗೆತೆಗೆದು !
ಎಲುಬಿನ ಕುದುರೆಯು ಕೆನೆಯುತ್ತಿತ್ತು ;
ನಾದವು ಬೊಮ್ಮವ ಬಿರಿವಂತಿತ್ತು !
ಎಲುಬಿನ ಮೂರ್ತಿಯು ಗಹಗಹಿಸಿತ್ತು ;
ಗುಡುಗಿನ ಮಾಲೆಯೆ ಪೊರಮಡುತಿತ್ತು !
ಕುದುರೆಯು ಕುಡಿದೂ, ಆಳೂ ಕುಡಿದೂ,
ತಿಂದರು ಶವಗಳ ಲರಿಲರಿ ಕಡಿದೂ !
ಬತ್ತಿತು ರಣಧುನಿ : ಇನ್ನೂ ದಾಹ !
ಮುಗಿದುವು ಹೆಣಗಳು : ಇನ್ನೂ ಹಸಿವೆ !

ಬಡವರ ಗಂಟಲ ಬೇಗೆಯ ದಾಹ !
ಬಡವರ ಹೊಟ್ಟೆಯ ಬೆಂಕಿಯ ಹಸಿವೆ !
ತುಂಬದು ಹೊಟ್ಟೆ ;
ತುಂಬದೊ ಹೊಟ್ಟೆ !....
ಕೆಟ್ಟೆ ! ಕೆಟ್ಟೆ !
ಅಯ್ಯೋ ಕೆಟ್ಟೆ !
ನೋಡಿದನೆನ್ನಂ ಬೆಟ್ಟದ ಮೇಲೆ !
ಬರುತಿಹನಯ್ಯೋ ! ಒಲ್ಲೆ ! ಒಲ್ಲೆ !
ನೋಡುತಲಿದ್ದೆ !
ಕಂಪಿಸಿ ಬಿದ್ದೆ !
"ಕಲ್ಕೀ ! ಕಲ್ಕೀ !" ಎನ್ನುತ ಚೀರಿ
ಕನಸೊಡೆದೆದ್ದೆ !
ಇನ್ನೆಲ್ಲಿಯ ನಿದ್ದೆ ?

೨೬-೧೦-೧೯೩೦

ಅವತಾರ

—ಮತ್ತೆ ಇದೇನು ?
ಎಂದೆಂದಿಗು ನಿನಗಿದೆ ಗತಿಯೇನು ?

ಶಿಲುಬೆಯ ಮೇಗಡೆ ನೇತಾಡುತ್ತಿಹೆ!
ಮುಳ್ಳಿನ ಮುಡಿಯನು ಇನ್ನೂ ಹೊತ್ತಿಹೆ!
ಕೈಕಾಲೆಡೆಯಲಿ ಕಬ್ಬಿನ ಕೂರ್ಮೊಳೆ!
ಹರಿಯುತ್ತಿದೆ ಕೆನ್ನೀರಿನ ಬಿಸಿಹೊಳೆ!
ನಿನಗಿನ್ನೂ ತಪ್ಪದೆ ಈ ಗೋಳು ?
ನಿನಗೆಂದೆಂದೂ ಶಿಲುಬೆಯೆ ಬಾಳು ?
ಓ ಕ್ರಿಸ್ತನೆ, ಕರುಣಿಸಿ ಹೇಳು !—

ನೋಡದೊ ಚಲಿಸುತ್ತಿದೆ ಕ್ರಿಸ್ತನ ಶವ!
ನುಡಿಯುತ್ತಿದೆ ಆಲಿಸು! ಶಿವಾ ಶಿವ!
ಸೂಸಿದೆ ಕನಿಕರದಲಿ ಕಣ್ಣೀರು,
ಕ್ರಿಸ್ತನು ಕ್ಷಮೆಯಾ ತವರೂರು:
“ದಿನದಿನ ದಿನವೂ ಶಿಲುಬೆಯನೇರಿ
ಕ್ಷಣಕ್ಷಣ ಕ್ಷಣವೂ ರಕ್ತವ ಸೋರಿ
ಲೋಕಕೆ ಪ್ರೇಮ ಅಹಿಂಸೆಯ ಸಾರಿ
ಮನುಜರ ಪಾಪವ ನಾ ತೊಳೆಯುತ್ತಿಹೆ;
ಸಾವಿರ ಸಲ ನಾ ಹುಟ್ಟಿಹೆ, ಸತ್ತಿಹೆ!
ದಿನವೂ ದಿನವೂ ನಿಂದಿಸಿ ನೋಯಿಸಿ
ದಿನದಿನ ದಿನವೂ ಹಂಗಿಸಿ ಸಾಯಿಸಿ

ಆರಾಧಿಸುವರು ಮೂದಲಿಸಿ !
ಅಂದು ಯಹೂದ್ಯರು ಮಾತ್ರವೆ ಅಲ್ಲ
ನನ್ನನು ಶಿಲುಬೆಗೆ ಹಾಕಿದರು ;
ಇಂದು ಜಗತ್ತಿನ ಮಾನವರೆಲ್ಲ
ಈ ಗತಿಗೆನ್ನನು ನೂಕಿಹರು !
ಎಲ್ಲರ ಎದೆಯೊಳು ಶಿಲುಬೆಯ ಹೊತ್ತು,
ದಿನದಿನ ಹುಟ್ಟಿ, ದಿನದಿನ ಸತ್ತು,
ಕ್ಷಣಕ್ಷಣದಲಿ ಅವತರಿಸುವೆ ನಾನು !
ಮಿಥ್ಯಾಭೂತಕೆ ನಿತ್ಯವು ದೇವರು
ತೆತ್ತಿಹ ಸತ್ಯದ ಬಲಿ ನಾನು !

ಬಡಬಗ್ಗರ ಗುಡಿಸಲುಗಳ ಮುರಿದು
ಗುಡಿಗಳ ಕಟ್ಟುವರೆನಗಾಗಿ !
ನರಳುತ್ತಿರೆ ನಾ ನೆತ್ತರು ಹರಿದು
ಸಂಗೀತದಿ ನನ್ನನು ಕೂಗಿ
ಪ್ರಾರ್ಥನೆ ಮಾಡಿದೆವೆಂದೆನ್ನುವರು,
ರಕ್ತ ಮಾಂಸವನೆ ತಿನ್ನುವರು !
ನನ್ನ ಧರ್ಮದಾ ಹೆಸರನೆ ಹೇಳಿ
ನನ್ನನೆ ಶಿಲುಬೆಗೆ ಕುತ್ತುವರು ;
ನನ್ನ ರಕ್ತದಾ ಹೊಳೆಯೊಳೆ ತೇಲಿ
ಹೊಸಹೊಸ ಶಿಲುಬೆಯ ಕೆತ್ತುವರು !
ಮಾನವರರಿಯರು ಕ್ಷಮಿಸೈ, ತಂದೆ :
ಅಂದೂ ಇಂದೂ ಎರಡೂ ಒಂದೇ !
ಕ್ರೈಸ್ತ ಯಹೂದ್ಯರು ಮುಸಲರು ಹಿಂದೂ
ಎಲ್ಲರು ನನ್ನವರೇ ಎಂದೆಂದೂ !”

ಆದರದೆಲ್ಲಿ ?
ಕ್ರಿಸ್ತನ ಶಿಲುಬೆಯ ಕಣಸು ಅದೆಲ್ಲಿ ?—
ಮತ್ತೆ ಇದೇನು ?
ಯಾವಾಗಲು ನಿನಗಿದೆ ಗತಿಯೇನು ?—

ಕಗ್ಗತ್ತಲ ಪಾತಾಳದ ಗವಿಯಲಿ,
ನಡುನಡುಗುತ್ತಿಹ ಕಿರಣಚ್ಛವಿಯಲಿ,
ಪ್ರವಹಿಪ ರಕ್ತದ ಧುನಿಯಲಿ ತೇಲಿ
ನುಗ್ಗುತ್ತಿದೆ ಅದೊ ಬೆಂಕಿಯ ದೋಣಿ !
ಅದರಲಿ ಮಾನವ ಮೂರ್ತಿಯ ಹೋಲಿ
ಕುಳಿತಿದೆ ಆದೊ ಅವತಾರಪ್ರಾಣಿ !
ಎದೆಯಲಿ ಅದೊ ಚುಚ್ಚಿದೆ ಬಾಣ !
ನೆತ್ತರು ಚಿಮುತ್ತಿದೆ ಕಾಣ !
ತುಡಿಯುತ್ತಿದೆ ಪ್ರಾಣ !
ನೋವಿನ ಬೀಡು
ಮೊಗವದು, ನೋಡು !—

ಹರಿಯುತ್ತಿರೆ ಶೋಣಿತ ವೇಣಿ,
ತೇಲುತ್ತಿರೆ ಬೆಂಕಿಯ ದೋಣಿ,
ಅವತಾರವ ಎದೆಯನು ಕಣೆ ಚುಚ್ಚಿರೆ,
ರಕ್ತದ ಹೊಳೆಯೋ ಕ್ಷಣಕ್ಷಣ ಹೆಚ್ಚಿರೆ,
ಯುಗಯುಗ ಯುಗವೂ ಹಗಲೂ ಇರುಳೂ
ಬೇಯುತ್ತಿದೆ ಜಗದೀಶನ ಕರುಳು !

—ಅಯ್ಯೊ ಇದೇನು ?—
ನಿನಗೆಂದೆಂದೂ ಇದೆ ಗತಿಯೇನು ?—

೨೮–೬–೧೯೩೩

ಮೊದಲ ಚರಣಗಳು

—